# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY
ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026



Grow Your Bussiness With us
1,10,000+
Digital E-PAPER READERS
No.1 HAMPI TIMES LEADING VIJAYANAGARA District News Paper
Contact for Advertisements: 9448633038



ಸಂಪುಟ:02 Volume:02 • ಸಂಚಿಕೆ: 187 Issue: 187 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 26.01.2025 26.01.2025 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2


**ಜನಸಾಮಾನ್ಯರ ಕಣ್ಣಲ್ಲಿ ಹಂಪಿ ಉತ್ಸವ-2025**
-ಎಂ.ಎಂ.ಶಿವಪ್ರಕಾಶ
ಪುಟ-2ರಲ್ಲಿ ನೋಡಿ

**ಆನಂದ ಬಾಣ**





ಸುದ್ದಿ, ಜಾಹೀರಾತಿಗಾಗಿ ಸಂಪರ್ಕಿಸಿ
M:9448633038


# ಪ್ರಜಾಪ್ರಭುತ್ವದ ಕೇಂದ್ರ ಸ್ತಂಭ ಮತದಾನ

## ಜಿಲ್ಲಾ ನ್ಯಾಯಾಧೀಶರಾದ ಅಬ್ದುಲ್ ರಹಿಮಾನ್ ಎ. ನಂದಗಡಿ ಹೇಳಿಕೆ | ಪ್ರತಿಯೊಬ್ಬರಿಗೂ ಮತದಾನದ ಹಕ್ಕು ಇದೆ
## 15 ನೇ ರಾಷ್ಟ್ರೀಯ ಮತದಾರರ ದಿನಾಚರಣೆ | ಮತದಾನ ಸರ್ಕಾರ ರಚನೆಗೆ ಸಹಕಾರಿ ಎಂದ ಡಿಸಿ ಎಂ.ಎಸ್.ದಿವಾಕರ



■ **ಹಂಪಿ ಟೈಮ್ಸ್ ಹೊಸಪೇಟೆ**
ಎಲ್ಲರಿಗೂ ಮತದಾನದ ಹಕ್ಕಿದ್ದು, ಚುನಾವಣೆ ಸಂದರ್ಭದಲ್ಲಿ ತಪ್ಪದೇ ಮತದಾನ ಮಾಡಬೇಕು. ಎಲ್ಲರ ಪಾಲ್ಗೊಳ್ಳುವಿಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಲ ತುಂಬಲಿದೆ ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹಿಮಾನ್ ಎ. ನಂದಗಡ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿ.ಪಂ ಹಾಗೂ ಸ್ವೀಪ್ ಸಮಿತಿಯಿಂದ ಏರ್ಪಡಿಸಿದ್ದ 15 ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು,1950 ರಲ್ಲಿ ಭಾರತದ ಚುನಾವಣಾ ಆಯೋಗದ ಸಂಸ್ಥಾಪನಾ ದಿನವನ್ನು ಗುರುತಿಸಲು ಪ್ರತಿ ವರ್ಷ ಜನವರಿ 25 ರಂದು ರಾಷ್ಟ್ರೀಯ ಮತದಾರರ ದಿನವನ್ನಾಗಿ ಆಚರಣೆ ಮಾಡಲಾಗುತ್ತದೆ. ಹೊಸ ಮತದಾರರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ ದಿನವನ್ನು ಆಚರಣೆ ಮಾಡಲಾಗುತ್ತದೆ. ಜನರಿಂದ ಆಯ್ಕೆಯಾಗುವ ಮೂಲಕ ಕಾರ್ಯ ನಿರ್ವಹಿಸುವ ಪ್ರಜಾಪ್ರಭುತ್ವದ ಕೇಂದ್ರ ಸ್ತಂಭವೇ ಮತದಾನವಾಗಿದೆ. ಭಾರತವು 1951 ರಲ್ಲಿ ತನ್ನ ಮೊದಲ ಸಾರ್ವತ್ರಿಕ ಚುನಾವಣೆಯ ನಂತರ ಮತದಾನಕ್ಕೆ ನಿಗದಿತ ವಯೋಮಾನದ ತತ್ವವನ್ನು ಅಳವಡಿಕೆ ಮಾಡಿಕೊಂಡಿದೆ. ರಾಷ್ಟ್ರ, ರಾಜ್ಯ ಮತ್ತು ಸ್ಥಳೀಯ ಶಾಸಕಾಂಗ ಸಂಸ್ಥೆಗಳಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ನಾಗರಿಕರು ಪ್ರತಿ ಐದು ವರ್ಷಗಳಿಗೊಮ್ಮೆ ಮತ ಚಲಾಯಿಸುತ್ತಾರೆ. ಜನರ ಒಂದು ಮತ ಕೂಡಾ ಅದರದ್ದೇ ಆದ ಪ್ರಾಮುಖ್ಯತೆ ಇದೆ, ಈ ನಿಟ್ಟಿನಲ್ಲಿ ಪ್ರತಿಯೊಂದು ಮತವು ಮಹತ್ವವನ್ನು ಹೊಂದಿದೆ.

ಜನರು ತಮ್ಮನ್ನು ಆಳುವ ಆಡಳಿತವನ್ನು ಮತದಾನದ ಮೂಲಕ ಆಯ್ಕೆ ಮಾಡುತ್ತಾರೆ. ಚುನಾವಣಾ ಆಯೋಗ ಸಾಂವಿಧಾನಿಕ ಸಂಸ್ಥೆ ಯಾಗಿದ್ದು, ಭಾರತದಲ್ಲಿ ಶಾಸಕಾಂಗದ ಎಲ್ಲಾ ಹಂತಗಳಲ್ಲಿ ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ನಡೆಸುವ ಜವಾಬ್ದಾರಿಯನ್ನು ಹೊಂದಿದೆ. ಹೊಸ ಮತದಾರರನ್ನು ಸೆಳೆಯುವ, ಉತ್ತೇಜಿಸುವುದು ಹಾಗೂ ಮತದಾರರ ಸಂಖ್ಯೆ ಯನ್ನು ಹೆಚ್ಚಳ ಮಾಡುವ ನಿಟ್ಟಿನಲ್ಲಿ ಈ ದಿನವನ್ನು ಆಚರಣೆ ಮಾಡಲಾಗುತ್ತದೆ ಎಂದು ಚುನಾವಣಾ ಸಂಸ್ಥೆ ಹೇಳುತ್ತದೆ. 'ದೇಶದ ಮತದಾರರಿಗೆ ಮೀಸಲಾಗಿರುವ ಈ ದಿನವನ್ನು ಮತದಾರರಲ್ಲಿ ಜಾಗೃತಿ ಮೂಡಿಸಲು ಮತ್ತು ಚುನಾವಣಾ ಪ್ರಕ್ರಿಯೆಯ ತಿಳುವಳಿಕೆ ನೀಡಲು ಆಚರಣೆ ಮಾಡಲಾಗುತ್ತದೆ ಎಂದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಮಾತನಾಡಿ, ಮತದಾರರ ದಿನವನ್ನು ಆಚರಿಸುವ ಕಾರ್ಯಸೂಚಿಯು ಮತದಾನದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದು, ವಿಶೇಷವಾಗಿ ದೇಶದ ಹೊಸದಾಗಿ ಅರ್ಹ ಮತದಾರರಲ್ಲಿ ಮತದಾನದ ಪ್ರಾಮುಖ್ಯತೆಯ ಬಗ್ಗೆ ಮಾಹಿತಿ ನೀಡುವುದು ಆಗಿದೆ. ಮತದಾನವು ಒಂದು ದೇಶದ ಸರ್ಕಾರವನ್ನು ರಚಿಸಲು ಸಹಾಯ ಮಾಡುವ ಮೂಲಭೂತ ಪ್ರಕ್ರಿಯೆಯಾಗಿದೆ. ಜನರು ಮತದಾನದ ಮೂಲಕ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಈ ಮತದಾನವು ಪ್ರಮುಖವಾಗಿದೆ ಎಂದರು.

ಹೊಸ ಯುವ ಮತದಾರರಿಗೆ ಮತದಾರರ ಗುರುತಿನ ಚೀಟಿ, ಉತ್ತಮ ತರಬೇತುದಾರರಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು.

ಈ ವೇಳೆ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಪ್ರಶಾಂತ ನಾಗಲಾಪುರ, ಸಿಜೆಎಂ ಮತ್ತು ಜೆಎಂಎಫ್ ಸಿ ನ್ಯಾಯಾಧೀಶರಾದ ಅಶೋಕ್ ಆರ್.ಹೆಚ್, ಎರಡನೇ ಅಪರ ಸಿವಿಲ್ ನ್ಯಾಯಾಧೀಶರಾದ ಸಂಜೀವ್ ಕುಮಾರ, ಮೂರನೇ ಅಪರ ಸಿವಿಲ್ ನ್ಯಾಯಾಧೀಶರಾದ ಜೆ.ಚೈತ್ರ, ಜಿಪಂ ಸಿಇಓ ನೋಂಗ್ಜಾಯ್ ಮೋಹಮದ್ ಅಲಿ ಅಕ್ರಮ್ ಷಾ, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಇತರರಿದ್ದರು.



# ಶಿಕ್ಷಕ ಕೊಟ್ರೇಶ್ ಮಾಳಗಿಗೆ ಜಿಲ್ಲಾ ಮಟ್ಟದ ಪ್ರಶಸ್ತಿ



ಹಗರಿಬೊಮ್ಮನಹಳ್ಳಿ ತಾಲೂಕಿನ ಬ್ಯಾಸಿಗಿದೇರಿ ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕ ಮಾಳಗಿ ಕೊಟ್ರೇಶ್ ಅವರಿಗೆ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ರಾಷ್ಟ್ರೀಯ ಮತದಾರರ ದಿನಾಚರಣೆ–2025 ಪ್ರಯುಕ್ತ ಜಿಲ್ಲಾ ಮಟ್ಟದ ಉತ್ತಮ ಮಾಸ್ಟರ್ ತರಬೇತುದಾರ(ಡಿಎಲ್ಎಂಟಿ)ರೆಂದು ಶನಿವಾರ ಪ್ರಮಾಣ ಪತ್ರ ನೀಡಿದರು. ನ್ಯಾಯಾಧೀಶರು, ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರು, ಜಿಪಂ ಸಿಇಓ ನೋಂಗ್ಜಾಯ್ ಮೊಹಮದ್ ಅಲಿ ಅಕ್ರಮ್ ಶಾ ಉಪಸ್ಥಿತರಿದ್ದರು.

**SSLC**
**ಈ ಭಾರಿ ಫಲಿತಾಂಶ ನಮ್ಮದೆ**
ದಿನಕ್ಕೊಂದು ವಿಷಯ ಪ್ರಶ್ನೋತ್ತರ ಸರಣಿ ಮಾರ್ಗದರ್ಶಿ ಹೈಸ್ಕೋರ್ ಗಳಿಸಲು ನಿತ್ಯ ಬರೆದು–ಓದಿ
ಪುಟ. 3ರಲ್ಲಿ
**ನಿನ್ನ ಏಳಿಗೆಗೆ ನೀನೇ ಶಿಲ್ಪಿ**
ನಿಮ್ಮ ಅಭಿಪ್ರಾಯಗಳನ್ನು ಇ–ಮೇಲ್ ಮಾಡಿ
E-mail: hampitimes@gmail.com
ಹಂಪಿ ಟೈಮ್ಸ್ ಬಳಗ ವಿಜಯನಗರ




ಹಂಪಿ ಟೈಮ್ಸ್
HAMPI TIMES

ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳ ಕುರಿತಾಗಿ ಉನ್ನತ ಮಟ್ಟದ ಸಭೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಡೆಸಿದ ಸುದ್ದಿಗೋಷ್ಠಿಯ ಮುಖ್ಯಾಂಶಗಳು:

## ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಗೆ ಅಂಕುಶ



**ಹಂಪಿ ಟೈಮ್ಸ್ ಬೆಂಗಳೂರು:** ಮೈಕ್ರೋ ಫೈನಾನ್ಸ್ ಗಳಿಂದ ಸಾಲ ಪಡೆಯುವವರ ಹಿತವನ್ನು ಕಾಪಾಡಲು ಸರ್ಕಾರ ಬದ್ಧವಾಗಿದೆ. ಸಾಲಗಾರರಿಗೆ ಕಿರುಕುಳ ನೀಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ಸಾಲಗಾರರ ಹಿತವನ್ನು ಕಾಪಾಡುವ ದೃಷ್ಟಿಯಿಂದ ಆದಷ್ಟು ಬೇಗನೆ ಸುಗ್ರೀವಾಜ್ಞೆ ಮೂಲಕ ಹೊಸ ಕಾನೂನು ರಚನೆ.

ಬಲವಂತದ ಸಾಲ ವಸೂಲಾತಿ ಮಾಡುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ, ಈ ಕುರಿತು ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಲು ಸಾಧ್ಯವಾಗುವಂತೆ ಕಾನೂನಿನಲ್ಲಿ ಅವಕಾಶ.

ಈಗಿರುವ ಕಾನೂನು ಇನ್ನಷ್ಟು ಬಲಪಡಿಸಲು ಕ್ರಮ. ಇದರಲ್ಲಿ ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡಲು ಕ್ರಮ. ನೋಂದಣಿಯಾಗದ ಲೇವಾದೇವಿಗಾರರ ಮೇಲೆ ನಿಯಂತ್ರಣಕ್ಕೆ ಹೊಸ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗುವುದು.

ಬೆದರಿಸಿ ಬಲವಂತದ ಸಾಲ ವಸೂಲಾತಿ ಒಪ್ಪಲು ಸಾಧ್ಯವಿಲ್ಲ. ಬಡ ಸಾಲಗಾರರ ಹಿತವನ್ನು ಕಾಪಾಡಲು ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಿದೆ.

ಯಾರಾದರೂ ಮೈಕ್ರೋ ಫೈನಾನ್ಸ್ ವ್ಯಕ್ತಿಗಳಿಂದ ಕಿರುಕುಳ ಎದುರಿಸುತ್ತಿದ್ದರೆ ಸ್ಥಳೀಯವಾಗಿ ಪೊಲೀಸರಿಗೆ ದೂರು ನೀಡಬೇಕು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಳು ಸಭೆ ನಡೆಸಿ ಈ ಕುರಿತ ಜನರಿಗೆ ಸೂಕ್ತ ತಿಳುವಳಿಕೆ, ಹಾಗೂ ಮೈಕ್ರೋ ಫೈನಾನ್ಸ್ ವ್ಯಕ್ತಿಗಳಿಗೆ ಎಚ್ಚರಿಕೆ ನೀಡಬೇಕು.

ಈ ಕುರಿತು ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಪ್ರತಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಹಾಯವಾಣಿ ಆರಂಭಿಸಲು ಸೂಚನೆ. ಇಲ್ಲಿ ದೂರು ನೀಡಬಹುದು; ಪೊಲೀಸರು ಸ್ವಯಂಪ್ರೇರಿತರಾಗಿ ದೂರು ದಾಖಲಿಸಲು ಸೂಚನೆ.

Banning of unregulated lending Activitie ಕುರಿತು ಕೇಂದ್ರ ಸರ್ಕಾರ ಕರಡು ಸಿದ್ಧಪಡಿಸಿದೆ. ಈ ಕುರಿತು ಸಮಗ್ರ ಸಮಾಲೋಚನೆ ನಡೆಸಿ, ಸಾಲದ ಸುಳಿಯಲ್ಲಿ ಸಿಲುಕಿರುವವರ ಹಿತ ಕಾಪಾಡಲು ಕ್ರಮ. ಕಿರುಕುಳ ತಪ್ಪಿಸಲು ಸೂಕ್ತ ಕಾನೂನು ರಚಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು.

ಸಾಲ ವಸೂಲಾತಿ ಕುರಿತಾಗಿ ಆರ್ ಬಿಐ ಹಲವು ಮಾರ್ಗಸೂಚಿ ಹೊರಡಿಸಿವೆ. ಸಂಜೆ 5ಗಂಟೆ ಬಳಿಕ ಮನೆಗೆ ಸಾಲ ವಸೂಲಾತಿಗೆ ಹೋಗಬಾರದು; ಬೆದರಿಕೆ ಹಾಕಬಾರದು. ವಸೂಲಾತಿಗೆ ಮೂರನೇ ವ್ಯಕ್ತಿಗಳನ್ನು ಬಳಸಿಕೊಳ್ಳಬಾರದು. ಇತ್ಯಾದಿ. ಇದನ್ನು ಉಲ್ಲಂಘಿಸುವವರ ವಿರುದ್ಧ ಕ್ರಿಮಿನಲ್ ಕ್ರಮ.

ಒಂದು ಕುಟುಂಬಕ್ಕೆ ಎಷ್ಟು ಸಾಲ ನೀಡಬಹುದು ಎಂಬ ಬಗ್ಗೆ ಆರ್ ಬಿಐ ಮಿತಿಯಿದೆ.ಇದನ್ನುಪಾಲಿಸಲಾಗುತ್ತಿದೆಯೇ? ಇದನ್ನುಅನುಷ್ಠಾನಗೊಳಿಸುವ ಕಾರ್ಯ ಮಾಡಲಾಗುವುದು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038


## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

ಹಂಪಿ ಈ ನಾಡಿನ ಸಾಂಸ್ಕೃತಿಕ ರಾಜಧಾನಿ ಹಾಗೂ ಕನ್ನಡಿಗರ ಹೆಮ್ಮೆಯ ಸಂಕೇತ. ನಮ್ಮ ಕಲೆ ಸಾಹಿತ್ಯ, ಇತಿಹಾಸ ಸಂಸ್ಕೃತಿಯ ಬಗ್ಗೆ ಹೆಮ್ಮೆ ಮೂಡಿಸುವಲ್ಲಿ ಹಂಪಿ ಉತ್ಸವದ ಪಾತ್ರ ಹಿರಿದಾದದ್ದು. ಹಂಪಿಯ ಗತವೈಭವವನ್ನು ನೆನಪಿಸುವ ಒಂದು ಪ್ರಯತ್ನ. ಆದರೆ ಈ ಉತ್ಸವ ಬರೀ ಇತಿಹಾಸವನ್ನು ನೆನೆಯುವುದು ಅಷ್ಟೇ ಅಲ್ಲ, ನಾಳಿನ ಸಾಂಸ್ಕೃತಿಕ ಕ್ಷೇತ್ರದ ಪ್ರತಿಭೆಗಳಿಗೆ ಅವಕಾಶ ಹಾಗೂ ಅಭಿವ್ಯಕ್ತಿಯನ್ನು ಕಲ್ಪಿಸುವ ವೇದಿಕೆಯು ಆಗಿದೆ. – ಎಂ.ಪಿ.ಪ್ರಕಾಶ್

# ಜನಸಾಮಾನ್ಯರ ಕಣ್ಣಲ್ಲಿ ಹಂಪಿ ಉತ್ಸವ

### ಪಕ್ಷಾತೀತ, ಸಾಂಸ್ಕೃತಿಕ ಉತ್ಸವವಾಗಲಿ | ಹಂಪಿ ಉತ್ಸವದ ರೂವಾರಿ ಎಂಪಿ ಪ್ರಕಾಶ ಹೆಸರು ವೇದಿಕೆಗೆ ಇರಲಿ ಧ್ವನಿ ಮತ್ತು ಬೆಳಕು ಉತ್ಸವಕ್ಕೆ ಮೆರಗು | ಕನ್ನಡ ಬಾರದವರಿಗೆ ಲಕ್ಷಲಕ್ಷ ಸುರಿಯಬೇಡಿ | ಸ್ಥಳೀಯ ಕಲಾವಿದರಿಗಿರಲಿ ಆದ್ಯತೆ ಪುನರಾವರ್ತನೆಗೆ ಕಡಿವಾಣ ಹಾಕಿ | ಶಿಫಾರಸ್ಸು ಇಲ್ಲದ ಹೊಸ ಕಲಾವಿದರಿಗೆ–ಕಲೆಗಳಿಗೂ ಪ್ರೋತ್ಸಾಹ ದೊರೆಯಲಿ



**ಹಂಪಿ ಉತ್ಸವ-2025**
**ಜ ನ ಮ ನ**

ಹಂಪಿ ಈ ನಾಡಿನ ಸಾಂಸ್ಕೃತಿಕ ರಾಜಧಾನಿ.ಈ ನೆಲದಲ್ಲಿ ಎಂ.ಪಿ. ಪ್ರಕಾಶ್ ಅವರು ರೂಪಿಸಿದ ಒಂದು ಹೊಸ ಪರಿಭಾಷೆ ಎಂದರೆ ಅದು ಹಂಪಿ ಉತ್ಸವ. ಅವರು ರೂಪಿಸಿದ ಈ ಹಂಪಿ ಉತ್ಸವದಲ್ಲಿ ಸ್ಥಳೀಯ ಹಾಗೂ ನಾಡಿನ ಸಾಹಿತ್ಯ, ಸಂಗೀತ, ಕಲೆ, ರಂಗಭೂಮಿ, ಕ್ರೀಡೆ, ರೈತರು ಕಾರ್ಮಿಕರು, ಮಹಿಳೆಯರ ಪಾಲ್ಗೊಳ್ಳುವಿಕೆ, ಎಲ್ಲ ಜಾತಿ ವರ್ಗ ಜನ ಸಮೂಹವನ್ನು ಒಳಗೊಳ್ಳುವಂತಹ ಈ ನೆಲದ ಮಣ್ಣಿನ ವಾಸನೆಯನ್ನು ಹೊಂದಿರುವ ಉತ್ಸವವನ್ನು ಅವರು ಆಚರಿಸಿ ಅದನ್ನು ಜನೋತ್ಸವವಾಗಿ ಮಾಡಿದವರು. ಹಂಪಿ ಉತ್ಸವವನ್ನು ಅವರು ಕೇವಲ ಸಾಂಸ್ಕೃತಿಕ ಉತ್ಸವವನ್ನಾಗಿ ನೋಡದೆ ಅಭಿವೃದ್ಧಿಯ ಸಾಮಾಜಿಕ ಬದಲಾವಣೆಯ ಒಂದು ಅಭಿವ್ಯಕ್ತಿಯಂದೆ ಅವರು ಭಾವಿಸಿದ್ದರು. ಅದಕ್ಕೆಂದೆ ಅವರು ಪ್ರತಿ ವರ್ಷವೂ ಅದನ್ನು ಸಂಘಟಿಸುತ್ತಿದ್ದ ರೀತಿಯೇ ಕುತೂಹಲಕಾರಿಯಾಗಿತ್ತು. ಹಂಪಿ ಉತ್ಸವವನ್ನು ಅವರು ಜನರ ಉತ್ಸವ ಜನೋತ್ಸವ ಎಂದೇ ಕರೆಯುತ್ತಿ ದ್ದರು. ಜನರು ಸಹ ಅದನ್ನು ಹಾಗೆ ಭಾವಿಸಿಕೊಂಡಿದ್ದರು. ಇವರು ನಾಡಿಗೆ ನೀಡಿದ ಸಾಂಸ್ಕೃತಿಕ ಕೊಡುಗೆಗಳಲ್ಲಿ ಹಂಪಿ ಉತ್ಸವ ಅತ್ಯಂತ ಮಹತ್ವದ್ದಾಗಿದೆ. ಜಿಲ್ಲಾಮಟ್ಟದಲ್ಲಿ ಪ್ರಾರಂಭವಾದ ಉತ್ಸವ ಕಡಿಮೆ ಅವಧಿಯಲ್ಲೇ ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದವರೆಗೂ ಬೆಳೆದು ನಿಂತಿದೆ. ಹಂಪಿಯ ಆಧುನಿಕ ಚರಿತ್ರೆಯಲ್ಲಿ ಹಂಪಿ ಉತ್ಸವದ ಚರಿತ್ರೆಯು ಸಹ ಬಹು ಮುಖ್ಯವಾದ ಚರಿತ್ರೆಯೇ ಆಗಿದೆ. ಈ ಹಂಪಿ ಉತ್ಸವವನ್ನು ಆಚರಿಸಲು ಸರಕಾರ ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲಾ ಆಡಳಿತವು ಹಂಪಿ ಉತ್ಸವವನ್ನು ಆಚರಿಸಲು ಉತ್ಸಾಹದಿಂದ ಸಜ್ಜಾಗುತ್ತದೆ. ಈ ಹಂಪಿ ಉತ್ಸವವನ್ನು ಎಂ.ಪಿ. ಪ್ರಕಾಶ್ ಅವರ ಆಶಯ ದಂತೆ ಆಚರಿಸುವ ಅವಶ್ಯಕತೆ ಇದೆ. ಹೀಗಾಗಿ ಉತ್ಸವ ಯಾವ ಯಾವ ಆಯಾಮಗಳನ್ನು ಒಳಗೊಂಡಿರ ಬೇಕು ಹಾಗೂ ಜನಸಾಮಾನ್ಯನ ದೃಷ್ಟಿಯಿಂದ ನೋಡಿದಾಗ ಹಂಪಿ ಉತ್ಸವವು ಯಾವ ರೀತಿ ಇರಬೇಕು ಎನ್ನುವ ಕುರಿತು ಒಂದಿಷ್ಟು ಚಿಂತನೆ ಸಲಹೆಗಳು ಇಲ್ಲಿವೆ.

ಹಂಪಿ ಉತ್ಸವವನ್ನು ಯಾವುದೇ ಪಕ್ಷ, ಗುಂಪು ಇತರೆ ಆಲೋಚನೆಗಳಿಂದ ಪೂರ್ವಗ್ರಹ ಪೀಡಿತರಾಗದೆ ಹಂಪಿ ಉತ್ಸವವನ್ನು ಪಕ್ಷಾತೀತವಾಗಿ ಸಾಂಸ್ಕೃತಿಕ ಉದ್ದೇಶವನ್ನು ಮಾತ್ರ ಇಟ್ಟುಕೊಂಡು ಅದನ್ನು ಆಯೋಜಿಸುವುದು ಅತ್ಯಂತ ಪ್ರಮುಖ ವಾದದ್ದಾಗಿದೆ.

ಹಂಪಿ ಉತ್ಸವದ ವೇದಿಕೆ ರಾಜಕೀಯದ ವೇದಿಕೆ ಆಗಬಾರದು. ಏಕೆಂದರೆ ಎಂಪಿ ಪ್ರಕಾಶ್ ಅವರು ಅದನ್ನು ರಾಜಕೀಯೇತರವಾದ ವೇದಿಕೆಯನ್ನಾಗಿ ರೂಪಿಸಿದ್ದರು. ಅದಕ್ಕೆಂದೆ ಅವರು ಉದ್ಘಾಟನೆಗೆ ಈ ರಾಜ್ಯದ ಮುಖ್ಯಮಂತ್ರಿಗಳನ್ನು ಆಹ್ವಾನಿಸಿದರೆ, ಸಮಾರೋಪಕ್ಕೆ ವಿರೋಧ ಪಕ್ಷದ ನಾಯಕರನ್ನು ಆಹ್ವಾನಿಸುತ್ತಿದ್ದರು. (ವಿಧಾನ ಸಭೆ ಹಾಗೂ ವಿಧಾನ ಪರಿಷತ್) ಅಲ್ಲದೆ ರಾಜ್ಯ, ಕೇಂದ್ರದ ಮಂತ್ರಿಗಳು, (ರಾಜ್ಯ ಮತ್ತು ಕೇಂದ್ರದಲ್ಲಿ ಬೇರೆ ಬೇರೆ ಪಕ್ಷದ ಸರ್ಕಾರಗಳಿದ್ದರು) ಶಾಸಕರನ್ನು, ನಾಡಿನ ಶ್ರೇಷ್ಠ ಸಾಹಿತಿಗಳನ್ನು, ಕಲಾವಿದರನ್ನುಮುಖ್ಯವೇದಿಕೆಗೆಅತಿಥಿಗಳನ್ನಾಗಿಆಹ್ವಾನಿಸುತ್ತಿದ್ದರು.

ಹಂಪಿ ಉತ್ಸವ ಶಾಶ್ವತವಾಗಿ ನೆನಪಿರುವಂತೆ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಪುಸ್ತಕ ಪ್ರಕಟಣೆಗೆ ಹಣಕಾಸು ಬಿಡುಗಡೆ ಮಾಡಿ ಮುಖ್ಯ ವೇದಿಕೆಯಲ್ಲಿ ಪುಸ್ತಕಗಳು ಬಿಡುಗಡೆಯಾಗುವಂತೆ ಮಾಡುತ್ತಿದ್ದರು. ಹಾಗೂ ಸಮಾರೋಪ ಸಮಾರಂಭದಲ್ಲಿ ಕನ್ನಡ ವಿಶ್ವವಿದ್ಯಾಲ ಯದ ಕುಲಪತಿಗಳನ್ನು ಆಹ್ವಾನಿಸುತ್ತಿದ್ದರು. ಇದು ಕನ್ನಡ ಸಾಹಿತ್ಯ ಸಂಸ್ಕೃತಿಗೆ ಕೊಡುವ ಗೌರವವು ಆಗಿದೆ. ಈ ಬಾರಿಯ ಉತ್ಸವದಲ್ಲಿ ಈ ಪದ್ದತಿಯನ್ನು ಮುಂದುವರಿಸಬೇಕು.

ಎಂಪಿ ಪ್ರಕಾಶ್ ಅವರು ಉತ್ಸವವನ್ನು ಆಚರಿಸುವ ಮೂರು ತಿಂಗಳ ಮೊದಲೇ ಪೂರ್ವ ತಯಾರಿಗಳ ಸಭೆಗಳನ್ನು ನಡೆಸಿ ,ಜಿಲ್ಲಾಮಟ್ಟದ ಅಧಿಕಾರಿಗಳನ್ನು ಹಾಗೂ ಕನ್ನಡ ಸಂಸ್ಕೃತಿ ಇಲಾಖೆಯ, ಪ್ರವಾಸೋದ್ಯಮ ಇಲಾಖೆಯ ರಾಜ್ಯಮಟ್ಟದ ಅಧಿಕಾರಿಗಳಿಗೆ ಈ ಉತ್ಸವದ ತಯಾರಿಗಾಗಿ ಮಾರ್ಗದರ್ಶನ ಮಾಡುತ್ತಿದ್ದರು. ಅಂದರೆ ಉತ್ಸವಕ್ಕೆ ಶ್ರದ್ಧೆ, ಅಚ್ಚುಕಟ್ಟು ತನದಿಂದ ಯಶಸ್ವಿಯಾಗುವಂತೆ ಅವರು ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯ ಕ್ರಮವನ್ನು ಮುನ್ನಡೆಸುತ್ತಿದ್ದರು.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Scan For Digital Colourful
HAMPI TIMES E-paper

ಹಂಪಿ ಉತ್ಸವವು ಹೇಳಿಕೇಳಿ ಒಂದು ಸಾಂಸ್ಕೃತಿಕ ಉತ್ಸವ ವಾಗಿರುವುದರಿಂದ ಅವರು ಉತ್ಸವದ ಅಹ್ವಾನ ಪತ್ರಿಕೆಯಲ್ಲಾಗಲಿ ಅಥವಾ ಬ್ಯಾನರ್ ಗಳಲ್ಲಿ ಮುಖ್ಯಮಂತ್ರಿ, ಮಂತ್ರಿ ಹಾಗೂ ತಮ್ಮ ಫೋಟೋಗಳನ್ನು ಮುದ್ರಿಸಿ ಕೊಳ್ಳದೆ ಕೇವಲ ಹಂಪಿಯ ಕಮಲ್ ಮಹಲ್, ಉಗ್ರ ನರಸಿಂಹ, ಕಲ್ಲಿನ ತೇರು ಇರುವ ಸ್ಮಾರಕಗಳ ಚಿತ್ರಗಳನ್ನು ಮುದ್ರಿಸಿ, ಒಂದು ಸಾಂಸ್ಕೃತಿಕ ಆಯಾಮವನ್ನು ಕಾಪಾಡಿ ಕೊಂಡು ಬರುತ್ತಿದ್ದರು. ಇದೇ ಪದ್ಧತಿಯು ಈ ಉತ್ಸವದಲ್ಲಿಯೂ ಮುಂದುವರಿಯಬೇಕು ಇದನ್ನು ಪಕ್ಷಾತೀತವಾಗಿ ಸಂಘಟಿಸಿದಾಗ ಮಾತ್ರ ಹಂಪಿ ಉತ್ಸವಕ್ಕೆ ಅರ್ಥ ಬರುತ್ತದೆ. ಏನು

ಹಂಪಿಯಲ್ಲಿ ಯಾವುದೇ ಬ್ಯಾನರ್ ಫ್ಲೆಕ್ಸ್ ಇತ್ಯಾದಿಗಳನ್ನು ಹಾಕದಂತೆ ಜಿಲ್ಲಾಡಳಿತವು ನಿರ್ಬಂಧ ಹೇರಬೇಕು ಇಲ್ಲದೇ ಹೋದರೆ ಪಕ್ಷಗಳ ಕಾರ್ಯಕರ್ತರು, ಅಭಿಮಾನಿಗಳು ಹಂಪಿಯ ತುಂಬಾ ಸ್ಮಾರಕಗಳು ಕಾಣದಂತೆ ಪ್ಲಾಕ್ಸಗಳನ್ನು ಅಳವಡಿಸಿದಾಗ ರಾಜಕೀಯ ಪಕ್ಷದ ಕಾರ್ಯಕ್ರಮದಂತೆ ಭಾಸವಾಗುತ್ತದೆ., (ಕಳೆದ ಉತ್ಸವದಲ್ಲಿ ಫ್ಲೆಕ್ಸಗಳಿಂದ ಹಂಪಿ ತುಂಬಿಹೋಗಿತ್ತು). ಈ ಬಾರಿ ಇದನ್ನು ಜಿಲ್ಲಾಡಳಿತವು ಗಂಭೀರವಾಗಿ ಪರಿಗಣಿಸಿ ಕೇವಲ ಕಾರ್ಯಕ್ರಮದ ಮಾಹಿತಿ ಇರುವ ಬ್ಯಾನರ್ ಗಳನ್ನು ಮಾತ್ರ ಅಳವಡಿಸುವ ಆದೇಶವನ್ನು ಹೊರಡಿಸುವುದು ಪರಿಸರದ ದೃಷ್ಟಿಯಿಂದ ಅವಶ್ಯವಿದೆ.

### ಸಂಗೀತ ನೃತ್ಯ ,ಕಲೆ, ನಾಟ,ಕ ಕವಿಗೋಷ್ಠಿ ಇತ್ಯಾದಿ

ಹಂಪಿ ಉತ್ಸವವು ನಡೆಯುವುದೇ ಸಂಗೀತ, ನೃತ್ಯ ಜಾನಪದ ಕಲೆಗಳ ಪ್ರದರ್ಶನ, ನಾಟಕ, ಕವಿಗೋಷ್ಠಿ ಮೊದಲಾದವುಗಳು ಪ್ರಮುಖ ವೇದಿಕೆಗಳಲ್ಲಿ ನಡೆಯುತ್ತವೆ. ಇವುಗಳಲ್ಲಿ ಬಹು ಮುಖ್ಯವಾಗಿ ಜನಪದ ಕಲೆಗಳನ್ನು, ಕಲಾವಿದರನ್ನು ಆಯ್ಕೆ ಮಾಡುವುದು ಬಹು ಕಷ್ಟದ ಕೆಲಸ. ಮೂರು ದಿನದ ವೇದಿಕೆಗಳಲ್ಲಿ ರಾಜ್ಯದಲ್ಲಿರುವ 250ಕ್ಕೂ ಹೆಚ್ಚು ಜನಪದ ಪ್ರಕಾರಗಳನ್ನು, ಕಲಾವಿದರಿಗೆ ಅವಕಾಶವನ್ನು ಕಲ್ಪಿಸುವುದು ಜಿಲ್ಲಾಡಳಿತಕ್ಕೆ ಅತ್ಯಂತ ಕಷ್ಟದ ಕೆಲಸವೆ ಆಗಿದೆ.ಆದ್ದರಿಂದ ಇದಕ್ಕಾಗಿ ಹಿರಿಯ ಕಲಾವಿದರು, ಅನುಭವಿಗಳು, ಆಸಕ್ತರು ಇರುವ ಒಂದು ಸಮಿತಿಯನ್ನು ರಚಿಸಿ ಆ ಮೂಲಕ ನಶಿಸುತ್ತಿರುವ ಜನಪದ ಆಟಗಳು, ಜನಪದ ಪ್ರದರ್ಶನ ಕಲೆಗಳನ್ನು ಗುರುತಿಸಿ, ಅಂತ ಜನಪದ ತಂಡಗಳಿಗೆ, ಕಲಾವಿದರಿಗೆ ಮೊದಲನೆ ಯದಾಗಿ ಅವಕಾಶವನ್ನು ಕಲ್ಪಿಸಬೇಕಾಗಿದೆ. ಪ್ರತಿ ವರ್ಷವೂ ಅದೇ ಜನಪದ ತಂಡ ಕಲಾವಿದರಿಗೆ ಅವಕಾಶ ಕೊಡದೆ ಇದುವರೆಗೂ ಹಂಪಿ ಉತ್ಸವದಲ್ಲಿ ಅವಕಾಶ ಸಿಗದ ಜಿಲ್ಲೆಯ ಕಲಾತಂಡ ಹಾಗೂ ಕಲಾವಿದರಿಗೆ ಅವಕಾಶವನ್ನು ಕಲ್ಪಿಸುವುದು ಅತ್ಯಂತ ಪ್ರಮುಖವಾದ ಕಾರ್ಯವಾಗಿದೆ.

ಹಂಪಿ ಉತ್ಸವವು ಸ್ಥಳೀಯ ಉತ್ಸವವಾಗಿರದೆ ರಾಜ್ಯ ರಾಷ್ಟ್ರಮಟ್ಟದವರೆಗೂ ಗುರುತಿಸಿಕೊಂಡಿದೆ ಹೀಗಾಗಿ ಸ್ಥಳೀಯ ಕಲಾವಿದರ ಜೊತೆಗೆ ಬೇರೆ ರಾಜ್ಯದ ಅಪರೂಪದ ಕಲಾತಂಡಗಳನ್ನು ಸಹ ಗುರುತಿಸಿ ಆಯ್ಕೆ ಮಾಡಬೇಕಾಗುತ್ತದೆ ಆದರೂ ಬಳ್ಳಾರಿ ವಿಜಯನಗರ ಜಿಲ್ಲೆಗಳ ಕಲಾವಿದರು ಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿ ಅವಕಾಶಗಳನ್ನು ಕಲ್ಪಿಸಬೇಕಾಗಿದೆ. ಏಕೆಂದರೆ ಈ ಎರಡು ಜಿಲ್ಲೆಗಳ ಕಲಾವಿದರು ಹಂಪಿ ಉತ್ಸವದೊಂದಿಗೆ ಭಾವನಾತ್ಮಕವಾದ ಸಂಬಂಧವನ್ನು ಹೊಂದಿದ್ದಾರೆ. ಹೀಗಾಗಿ ಯಾರಿಗೂ ಬೇಸರವಾಗ ದಂತೆ ಎಲ್ಲರನ್ನೂ ಒಳಗೊಳ್ಳುವಂತಹ ಕಾರ್ಯವನ್ನು ಜಿಲ್ಲಾಡಳಿತವು ಅತ್ಯಂತ ಮುತ್ತುವರ್ಜಿ ವಹಿಸಿ ಮಾಡುವುದು ಅವಶ್ಯವಿದೆ.

ಹಂಪಿ ಉತ್ಸವದ ಅತ್ಯಂತ ಪ್ರಮುಖವಾದ ಆಕರ್ಷಣೆ ಎಂದರೆ ಅದು ಧ್ವನಿ ಬೆಳಕು ಕಾರ್ಯಕ್ರಮ ಈ ಕಾರ್ಯಕ್ರಮವನ್ನು ಆಯೋಜಿಸದಿದ್ದರೆ ಹಂಪಿ ಉತ್ಸವವು ಪೂರ್ಣವಾಗುವುದಿಲ್ಲ ಹಾಗಾಗಿ ಈ ಉತ್ಸವದಲ್ಲಿಯು ಧ್ವನಿ ಬೆಳಕು ಕಾರ್ಯಕ್ರಮವನ್ನು ಆಯೋಜಿಸಿ ಹೊಸ ಹಾಗೂ ಯುವ ಕಲಾವಿದರಿಗೆ ಅವಕಾಶವನ್ನು ಕಲ್ಪಿಸಿ ಕೊಡಬೇಕಾಗಿದೆ.

### ಸಂಗೀತ ಕಾರ್ಯಕ್ರಮಗಳು

ಹಂಪಿ ಉತ್ಸವದ ಪ್ರಮುಖ ವೇದಿಕೆಯಲ್ಲಿ ಸಂಗೀತ ಹಾಗೂ ರಸಮಂಜರಿ ಕಾರ್ಯಕ್ರಮಗಳು ಹೆಚ್ಚು ಆಕರ್ಷಣೀಯವಾಗಿರುತ್ತವೆ ಹಾಗಾಗಿ ಶಾಸ್ತ್ರೀಯ ಸಂಗೀತ, ಭಾವಗೀತೆ ಮೊದಲಾದ ಪರಂಪರೆಯ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸುವುದು ಹೆಚ್ಚು ಸೂಕ್ತ ವಾಗಿದೆ. ಜನರನ್ನು ಆಕರ್ಷಿಸುವ ಸಲುವಾಗಿ ಚಲನಚಿತ್ರ ನಟರನ್ನು ಸಂಗೀತಗಾರರನ್ನು ಕರೆಸಿ ಹಾಗೂ ಹೊರ ರಾಜ್ಯದ ಕನ್ನಡಬಾರದ ಸಂಗೀತಗಾರರನ್ನು ಕರೆಸಿ ಲಕ್ಷಾಂತರ ರೂಪಾಯಿಗಳ ಸಂಭಾವನೆ ಕೊಡುವ ಬದಲು ಕನ್ನಡಕ್ಕೆ ಹೆಚ್ಚಿನ ಆದ್ಯತೆ ನೀಡಿ ಕನ್ನಡದ ಸಂಗೀತಗಾರರು ಕರೆಯಿಸಿ ಹಾಡಿಸುವುದು ಜನಸಾಮಾನ್ಯರ ಆಶಯವಾಗಿದೆ. ಹಂಪಿ ಉತ್ಸವದ ಸಂಘಟಕರು ತಮಗೆ ಬೇಕಾದ ಚಲನಚಿತ್ರ ನಟರನ್ನು ತಮ್ಮ ಪರಿಚಯಸ್ಥರನ್ನು ಸಂಬಂಧಿಕರನ್ನು ಕರೆಯಿಸಿ ಹಾಡಿ ಕುಣಿಸುವ ಬದಲು ಅರ್ಥಪೂರ್ಣವಾದ ಕಲಾವಿದರನ್ನು ಕರೆಯಿಸಿ ಹಾಡಿಸುವುದು ಹಂಪಿ ಉತ್ಸವಕ್ಕೆ ನೀಡುವ ಗೌರವವಾಗಿದೆ

### ಕವಿಗೋಷ್ಠಿ

ಹಲವಾರು ವರ್ಷಗಳ ಹಿಂದೆ ಕವಿ ಗೋಷ್ಠಿಗಳಲ್ಲಿ ಮಹತ್ತರ ಕವಿಗಳು ಹಾಗೂ ಗಂಭೀರ ಸಾಹಿತ್ಯದ ಓದುಗರು, ಕವಿಗಳು ಭಾಗವಹಿಸುತ್ತಿದ್ದರು. ಆದರೆ ಬದಲಾದ ಸಂದರ್ಭದಲ್ಲಿ ಫೇಸ್ಬುಕ್ ಗಳಲ್ಲಿ ನಾಲ್ಕಾರು ಕವಿತೆಗಳನ್ನು ಬರೆದು ಒಂದಿಷ್ಟು ಲೈಕ್ ಗಳನ್ನು ಗಿಟ್ಟಿಸಿಕೊಂಡವರು ಈಗ ಕವಿಗಳಾಗಿ ಹೊರಹೊಮ್ಮಿದ್ದಾರೆ ಇಂಥವರೇ ಈಗ ಕವಿಗೋಷ್ಠಿಗಳಲ್ಲಿ ಬಹುತೇಕವಾಗಿ ಭಾಗವಹಿಸುವ ಕವಿಗಳು. ಇಂತಹ ಕವಿಗಳಿಂದಾಗಿ ಈಗಿನ ಕವಿಗೋಷ್ಠಿಗಳು ಅರ್ಥ ಹಾಗೂ ಗಂಭೀರತೆಯನ್ನು ಕಳೆದುಕೊಂಡಿವೆ. ಹೀಗಾಗಿಯೇ ಕಳೆದ ಹಂಪಿ ಉತ್ಸವದ ಸಂದರ್ಭದಲ್ಲಿ ಕವಿತೆಯನ್ನು ವಾಚನ ಮಾಡುವ ಕವಿಗಳನ್ನು ಬಿಟ್ಟರೆ ಇವರ ಕವಿತೆಗಳನ್ನು ಕೇಳಿ ಆಸ್ವಾದಿಸುವ ಕೇಳುಗರು ಇರಲಿಲ್ಲ. ಹಾಗಾಗಿ ಕವಿಗಳನ್ನು ವೇದಿಕೆ ಮೇಲೆ ಕುಳ್ಳಿರಿಸದೆ ಕವಿಗಳೇ ಕವಿತೆಗಳನ್ನು ಆಲಿಸುವವರಾಗಿ ತಮ್ಮ ಕವಿತೆ ಓದಿ ಮತ್ತೊಬ್ಬರ ಕವಿತೆಯನ್ನು ಆಲಿಸುವಂತೆ ಅಲ್ಲಿಯ ನಿರೂಪಕರು ನಿರ್ಬಂಧ ಹೇರಿದ್ದರು. ಕವಿಗೋಷ್ಠಿಯ ವಾಸ್ತವತೆಯನ್ನು ತೋರಿಸುತ್ತದೆ. ಆದ್ದರಿಂದ ಇಂತಹ ಫೇಸ್ಬುಕ್ ಕವಿಗಳನ್ನು ಕವಿಗೋಷ್ಠಿಗೆ ಆಯ್ಕೆ ಮಾಡದೆ ಕೆಲ ಮಾನದಂಡಗಳನ್ನು ಅನುಸರಿಸಿ ನಾಡಿನ ಹೆಸರಾಂತ ಕವಿಗಳ ಜೊತೆಗೆ ಯೋಗ್ಯ ಯುವ ಕವಿಗಳನ್ನು ಹಾಗೂ ಸ್ಥಳಿಯ ಕವಿಗಳನ್ನು ಆಯ್ಕೆ ಮಾಡುವುದು ಹೆಚ್ಚು ಸೂಕ್ತವಾಗಿದೆ. ಇಲ್ಲದೆ ಹೋದರೆ ಕವಿಗೋಷ್ಠಿಗೆ ಅರ್ಥವಿರುವುದಿಲ್ಲ ಹಾಗೂ ಮುಂದಿನ ದಿನಗಳಲ್ಲಿ ಇಂತಹ ಕವಿಗೋಷ್ಠಿಗಳನ್ನು ಕಾಟಾಚಾರಕ್ಕೆ ನಡೆಸುವುದಕ್ಕಿಂತ ಕೈಬಿಡುವುದೇ ಹೆಚ್ಚು ಸೂಕ್ತವಾಗಿದೆ.

### ಪುಸ್ತಕ ಮೇಳ

ಹಂಪಿ ಉತ್ಸವದಲ್ಲಿ ಕೃಷಿ ಮೇಳ ಕೈಗಾರಿಕೆ ಮೇಳ ಹೀಗೆ ಹಲವಾರುಮೇಳಗಳನ್ನುಒಂದೇಸೂರಿನಡಿಆಯೋಜಿಸಲಾಗುತ್ತದೆ, ಆದರೆ ಇವೆಲ್ಲಕ್ಕಿಂತ ಮುಖ್ಯವಾದದ್ದು ಪುಸ್ತಕ ಮೇಳ. ಈ ಪುಸ್ತಕ ಮೇಳವನ್ನು ಸುಲಭವಾಗಿ ಜನರಿಗೆ ಹಾಗೂ ಪುಸ್ತಕ ಆಸಕ್ತರಿಗೆ ತಲುಪುವಂತಥಹ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ. ಈ ಬಗ್ಗೆ ಆಯೋಜಕರು ಚಿಂತಿಸಿ ಮುಖ್ಯ ವೇದಿಕೆ ಮುಂಭಾಗದಲ್ಲೇ ಪುಸ್ತಕ ಮೇಳವನ್ನು ಆಯೋಜಿಸುವುದು ಸೂಕ್ತವಾಗಿದೆ ಇದು ಸಾಧ್ಯವಾಗದಿದ್ದರೆ ಒಂದೇ ಸೂರಿನಡಿಯಲ್ಲಿ ಏರ್ಪಡಿಸುವಾಗ ಮೊದಲು ಪುಸ್ತಕ ಮಳಿಗೆಗಳಿಗೆ ಆದ್ಯತೆ ಸಿಗುವಂತೆ ಮಳಿಗೆಗಳನ್ನು ರೂಪಿಸಬೇಕಾಗಿದೆ. ಹಾಗೂ ಪುಸ್ತಕ ಮಳಿಗೆಗಳನ್ನು ಉಚಿತವಾಗಿ ನೀಡಬೇಕಾಗಿದೆ. ಪುಸ್ತಕ ಓದುವ ಕೊಳ್ಳುವ ಸಂಸ್ಕೃತಿಯನ್ನು ಸರ್ಕಾರವು ಪ್ರೋತ್ಸಾಹಿಸ ಬೇಕಾಗಿರುವುದರಿಂದ ಪುಸ್ತಕ ವ್ಯಾಪಾರಿಗಳಿಗೆ ಉಚಿತವಾಗಿ ಮಳಿಗೆಗಳನ್ನು ನೀಡುವುದರ ಮೂಲಕ ಪುಸ್ತಕ ಸಂಸ್ಕೃತಿಯನ್ನು ಬೆಳೆಸಬೇಕಾಗಿದೆ. ಎಂಪಿ ಪ್ರಕಾಶ್ ಅವರ ಕಾಲದಲ್ಲಿ ಪುಸ್ತಕ ಮಳಿಗೆ ಗಳನ್ನು ಪುಸ್ತಕ ವ್ಯಾಪಾರಿಗಳಿಗೆ ಉಚಿತವಾಗಿ ನೀಡುತ್ತಿದ್ದರು. ಈ ಉತ್ಸವದಿಂದ ಈ ಪದ್ಧತಿ ಜಾರಿಗೊಳಿಸಲು ಜಿಲ್ಲಾಡಳಿತವ ಕ್ರಮ ಕೈಗೊಳ್ಳಬೇಕಾಗಿದೆ.

ಮುಖ್ಯ ವೇದಿಕೆಯ ಮುಂಭಾಗದಲ್ಲಿ ವಿಐಪಿ ಪಾಸುಗಳನ್ನು ಹೊಂದಿದವರಿಗೆ ಮಾತ್ರ ಅವಕಾಶ ಕಲ್ಪಿಸಲಾಗುತ್ತದೆ ಆದರೆ ಈ ವಿಐಪಿ ಪಾಸುಗಳು ಆಡಳಿತ ಪಕ್ಷದ ರಾಜಕಾರಣಿಗಳು, ಕಾರ್ಯಕರ್ತರಿಗೆ ಮಾತ್ರ ವಿತರಣೆ ಆಗುತ್ತವೆ. ಹಂಪಿ ಉತ್ಸವದ ಆಸಕ್ತರಿಗೆ ಲಭ್ಯವಾಗುವುದಿಲ್ಲ ಹಾಗಾಗಿ ವಿಶೇಷವಾಗಿ ಹಂಪಿ ಉತ್ಸವದ ಆಸಕ್ತರು ವೇದಿಕೆ ಮುಂಭಾಗದಲ್ಲಿ ಕುಳಿತು ಕಾರ್ಯಕ್ರಮ ವನ್ನು ವೀಕ್ಷಿಸುವಂಥಾಗಲು ವಿಐಪಿ ಪಾಸ್ ಸಂಸ್ಕೃತಿಯನ್ನು ರದ್ದುಪಡಿಸಿ ಆಸಕ್ತರೆಲ್ಲರೂ ಕುಳಿತು ನೋಡುವಂತಾಗಬೇಕು. ಇಲ್ಲದೆ ಹೋದರೆ ವಿಐಪಿ ಸಂಸ್ಕೃತಿಯಿಂದ ಜನಸಾಮಾನ್ಯರು ಹಾಗೂ ಆಸಕ್ತರು ಅವಕಾಶ ವಂಚಿತರಾಗುತ್ತಿದ್ದಾರೆ. ಅತಿಯಾದ ಭದ್ರತಾ ದೃಷ್ಟಿಯಿಂದಲೂ ಸಹ ಜನಸಾಮಾನ್ಯರಿಗೆ ಕಿರಿಕಿರಿ ಉಂಟಾಗುತ್ತದೆ ಹಾಗಾಗಿ ಜನರಿಗೆ ತೊಂದರೆ ಆಗದಂತೆ ಭದ್ರತಾ ವ್ಯವಸ್ಥೆಯನ್ನು ಕೈಗೊಳ್ಳಬೇಕು ಎನ್ನುವುದು ಜನಸಾಮಾನ್ಯರ ಅಭಿಪ್ರಾಯವಾಗಿದೆ.

### ವೇದಿಕೆಗೆ ಎಂ.ಪಿ.ಪ್ರಕಾಶ್ ಹೆಸರಿರಲಿ

ಈ ಮೇಲಿನ ಕೆಲವು ಅಭಿಪ್ರಾಯಗಳನ್ನು ಸಲಹೆಗಳನ್ನು ಹಂಪಿ ಉತ್ಸವದ ಸಂಘಟಕರು ಎಷ್ಟರಮಟ್ಟಿಗೆ ಸ್ವೀಕರಿಸುತ್ತಾರೆ ಗೊತ್ತಿಲ್ಲ ಆದರೆ ಪರಿಗಣಿಸಬೇಕಾದ ಒಂದು ಬಹು ಮುಖ್ಯ ಸಲಹೆ ಎಂದರೆ ಈ ಹಂಪಿ ಉತ್ಸವವನ್ನು ಸಂಘಟಿಸಿ ರೂಪಿಸಿದ ಮಾಜಿ ಉಪ ಮುಖ್ಯ ಮಂತ್ರಿಗಳು ಸಾಂಸ್ಕೃತಿಕ ರಾಯಭಾರಿ, ಸಜ್ಜನ ರಾಜಕಾರಣಿಯಾಗಿದ್ದ ಎಂ ಪಿ ಪ್ರಕಾಶ್ ಅವರ ಹೆಸರನ್ನು ಮುಖ್ಯ ವೇದಿಕೆಗೆ ಇಡುವುದರ ಮೂಲಕ ಹಂಪಿ ಉತ್ಸವಕ್ಕೆ ಒಂದು ಮೆರುಗನ್ನು ಕಲ್ಪಿಸಬೇಕಾಗಿದೆ. ಈ ಸಂದರ್ಭದಲ್ಲಿ ಒಂದು ಘಟನೆ ನೆನಪಾಗುತ್ತದೆ ಹಂಪಿ ಉತ್ಸವವನ್ನು ಕಾಂಗ್ರೆಸ್ ಸರ್ಕಾರದಲ್ಲಿ ಆಯೋಜಿಸಲಾಗುತ್ತಿತ್ತು ಆ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಿದ್ದ ಎಂ.ವೈ. ಘೋರ್ಪಡೆಯವರು, ಹಂಪಿಯ ಶಿವರಾಮದೂತರ ಆಶ್ರಮದಲ್ಲಿ ಹಂಪಿ ಉತ್ಸವದ ಪೂರ್ವಭಾವಿ ಸಭೆಯನ್ನು ಕರೆದಿದ್ದರು, ಆ ಸಭೆಯಲ್ಲಿ ಅವರು ಮಾಜಿ ಮಂತ್ರಿಗಳಾಗಿದ್ದ ಎಂ.ಪಿ. ಪ್ರಕಾಶ್ ಅವರನ್ನು ಆಹ್ವಾನಿಸಲು ಸೂಚನೆ ನೀಡಿದ್ದರು, ಆಗ ಹಡಗಲಿಯ ಶಾಸಕರಾಗಿದ್ದವರು ಎದ್ದು ನಿಂತು ಅವರನ್ನು ಚುನಾವಣೆಯಲ್ಲಿ ಜನರು ತಿರಸ್ಕರಿಸಿದ್ದಾರೆ ಹಂಪಿ ಉತ್ಸವಕ್ಕೆ ಅವರನ್ನು ಆಹ್ವಾನಿಸಬಾರದು ಎಂದು ವಿರೋಧ ವ್ಯಕ್ತಪಡಿಸಿದಾಗ, ಘೋರ್ಪಡೆಯವರು ನಾವು ಆಚರಿಸುತ್ತಿರುವ ಈ ಹಂಪಿ ಉತ್ಸವವನ್ನು ಪ್ರಾರಂಭಿಸಿ ಇದನ್ನು ದೊಡ್ಡ ಉತ್ಸವವನ್ನಾಗಿ ಮಾಡಿದವರೇ ಎಂ.ಪಿ .ಪ್ರಕಾಶ್ ಅವರು. ಹಾಗಾಗಿ ಅವರನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಿದ್ದೇನೆ. ನೀವು ನಿಮ್ಮ ರಾಜಕೀಯವನ್ನು ನಿಮ್ಮ ಊರಲ್ಲಿ ಇಟ್ಟುಕೊಳ್ಳಿ ಎಂದು ಹೇಳಿದ್ದು ನೆನಪಾಯಿತು ಅಷ್ಟೇ.

ಸ್ಥಳೀಯರಿಗೆ ಆದ್ಯತೆಯೆಂದು ಕೇವಲ ಹೊಸಪೇಟೆಯವರಿಗೆ ಆದ್ಯತೆ ನೀಡುವುದು ಸರಿಯಲ್ಲ. ಪಶ್ಚಿಮ ತಾಲೂಕುಗಳ ಕಲಾವಿದರು, ಕವಿಗಳು, ಸಾಹಿತಿಗಳನ್ನು ಹಂಪಿ ಉತ್ಸವಕ್ಕೆ ಪರಿಗಣಿಸುವುದು ಹೆಚ್ಚು ಸೂಕ್ತವಾಗಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಹಲವು ಗಣ ಒಂದೇ ಮನ

ಭಾರತೀಯರ ಹೆಮ್ಮೆ ನಮ್ಮ ಸಂವಿಧಾನ
ಅಡಗಿದೆ ಅದರಲ್ಲಿ ನಮ್ಮೆಲ್ಲರ ಅಭಿಮಾನ

ಇದರಲ್ಲಿದೆ ನಾವು ಅನುಸರಿಸಬೇಕಾದ
ರೀತಿ ನೀತಿ
ಸಾರುತಿದೆ ನಾವೆಲ್ಲ ಒಂದೇ ಇದ್ದರು
ಹಲವು ಪಂಥ ಜಾತಿ

ಕೊಡುವುದು ಎಲ್ಲರಿಗೂ ಸಮಾನವಾದ
ಹಕ್ಕು
ತೋರುವುದು ಪ್ರಗತಿಯಡೆಗೆ ಸಾಗುವ
ದಿಕ್ಕು

ನೀಡುತ ಎಲ್ಲರಿಗೂ ಅಭಿವ್ಯಕ್ತಿಯ ಸ್ವಾತಂತ್ರ್ಯ
ಕಳೆಯುತ್ತ ನಮ್ಮೆಲ್ಲರ ದಾಸ್ಯದ ಪರತಂತ್ರ

ಸಂವಿಧಾನವ ನಾವೆಲ್ಲರೂ ಗೌರವಿಸೋಣ
ಅದರ ಹಿರಿಮೆ ವೈಭವವ ಸಾರೋಣ

ಸಂವಿಧಾನದ ಶಿಲ್ಪಿ ಅಂಬೇಡ್ಕರ್ ಅವರು
ಭಾರತದ ಸಾರ್ವಭೌಮತ್ವ ಸಾರಿದರು

ಹಲವು ಗಣ ಒಂದೇ ಮನ ಅದು
ಭಾರತೀಯರ ಗುಣ
ಪ್ರತಿಯೊಬ್ಬರಲ್ಲೂ ದೇಶಪ್ರೇಮದ ಅರಿವು
ಮೂಡಿಸೋಣ

– ಚೇತನ ಭಾರ್ಗವ, ಬೆಂಗಳೂರು

### ದೇಶಪ್ರೇಮ

ನಮ್ಮ ಭಾರತ ದೇಶವಿದು ಶಾಂತಿಯ ಧಾಮ
ಪುಣ್ಯ ಮಾಡಿರಬೇಕಿಲ್ಲಿ ಪಡೆಯಲು ಜನುಮ
ತ್ರಿವರ್ಣಗಳಿಂದ ಕಂಗೊಳಿಸುತಿಹುದು ಭಾರತ
ನಾವೆಲ್ಲರೂ ಒಂದೇ ಎಂಬ ಭಾವೈಕ್ಯತೆ
ಸಾರುತ

ವಿವಿಧತೆಯಲ್ಲಿ ಏಕತೆಯನ್ನು ಕಂಡ ನೆಲವಿದು
ಮಹಾನ್ ದೇಶಭಕ್ತರನ್ನು ಕೊಟ್ಟ ಪುಣ್ಯ
ಮಣ್ಣಿದು
ಎತ್ತರೆತ್ತರಕ್ಕೆ ಏರುತಿರಲಿ ಭಾರತಮಾತೆಯ
ಕೀರುತಿ
ಅನುದಿನವೂ ನಗುತಿರಲಿ ನಮ್ಮ ತಾಯಿ
ಭಾರತಿ

ಬೆಳಗುತಿರಲಿ ಹೃದಯದಲ್ಲಿ ದೇಶಪ್ರೇಮದ
ದೀಪ
ಕಾಣುತಿರಲಿ ಕಂಗಳಲ್ಲಿ ಭಾರತಾಂಬೆಯ
ಪ್ರತಿರೂಪ
ಮೂಡುತಿರಲಿ ಮನದಲ್ಲಿ ಸೌಹಾರ್ದತೆಯ
ಭಾವ
ನೆನೆಯುತಿರಲಿ ಹೃನ್ಮನ ಸೈನಿಕರ ತ್ಯಾಗ,
ಬಲಿದಾನವ

ಮನದಲ್ಲಿ ಸದಾ ಸ್ಮರಿಸೋಣ ಭಾರತ
ಮಾತೆಯ
ಅಶನ, ವಸನ, ವಸ್ತ್ರ ಕರುಣಿಸಿದ
ಮಹಾತಾಯಿಯ
ಹೃನ್ಮನದಲಿ ಉರಿಯುತಿರಲಿ ರಾಷ್ಟ್ರಭಕ್ತಿಯ
ಜ್ವಾಲೆ
ನಮ್ಮ ದೇಶವಾಗಲಿ ಪ್ರಪಂಚಕ್ಕೆಲ್ಲಾ
ಸ್ಫೂರ್ತಿಯ ಸೆಲೆ!

– ಪ್ರಜ್ಞಾ ರವೀಶ್ ಕುಳಮರ್ವ,
ಕಾಸರಗೋಡು.

### ನಮ್ಮ ಹೆಮ್ಮೆ ನಮ್ಮ ಸಂವಿಧಾನ

ಎಲ್ಲರನು ಒಳಗೊಂಡು ಜೊತೆಯಾಗಿ ಕರಕೊಂಡು
ಹೋಗುವುದ ಕಲಿಸಿತು ಸಂವಿಧಾನ.... (ಪ )

ಅವಗು ಇವಗೂ ಅಂತೆ ನನಗೂ ನಿನಗೂ
ಕೂಡ...
ನಿಯಮ ಒಂದೇ ಎನುವ ಸಂವಿಧಾನ....(1)

ಹಕ್ಕುಗಳ ಪಡೆಯುತ್ತ ಕರ್ತವ್ಯ ಮಾಡುವ..
ನೀತಿಯನು ಹೇಳುವ ಸಂವಿಧಾನ.... (2)

ಎಲ್ಲರಿಗೂ ಅವಕಾಶ ಪ್ರತಿಭೆಯ ಪ್ರಕಾಶ
ಬಯಸೊ ಗುರಿಯಿರುವ ಸಂವಿಧಾನ.. (3)

ಸಕಲರ ಉದ್ಧಾರ ದೇಶಕ್ಕೆ ಆಧಾರ
ಎಂಬ ತತ್ವವ ಹೇಳೊ ಸಂವಿಧಾನ... (4)

ನಮ್ಮ ಹೆಮ್ಮೆ ನಮ್ಮ ಸಂವಿಧಾನ
ಇದರ ನೆರವಿಂದೆಮಗೆ ಸ್ಥಾನ–ಮಾನ... (5)

– ಶೇಖರಯ್ಯ ಟಿ ಎಚ್ ಎಂ
ಶಿಕ್ಷಕರು ಗೆದ್ದಲಗಟ್ಟೆ, ಕೂಡ್ಲಿಗಿ

# ಗಣರಾಜ್ಯೋತ್ಸವದ ಮಹತ್ವ - ಆಚರಣೆ

ಇಂದಿನದು 76ನೇ ಗಣರಾಜ್ಯೋತ್ಸವ. ಈ ದಿನ ಪ್ರತಿಯೊಬ್ಬ ಭಾರತೀಯನಿಗೆ ಹಬ್ಬವೇ ಸರಿ. ಭಾರತ ಸಂವಿಧಾನವು 1949 ನವೆಂಬರ್ 26ರಂದು ಅಂಗೀಕಾರವಾಗಿ 1950 ಜನವರಿ 26ರಂದು ಜಾರಿಗೆ ಬಂದ ಈ ಶುಭದಿನವನ್ನು ಸಂಭ್ರಮಿಸಲು ಗಣರಾಜ್ಯೋತ್ಸವ ದಿನಚಾರಣೆ ಎಂದು ಆಚರಿಸಲಾಗುತ್ತದೆ. ಅಂದರೆ ನಾವು ಬ್ರಿಟಿಷರಿಂದ 1947ರಲ್ಲಿ ಸ್ವಾತಂತ್ರ್ಯ ಪಡೆದ ನಂತರ ಸುಮಾರು 3 ವರ್ಷಗಳ ತರುವಾಯ ನಮ್ಮ ದೇಶವು ಸಾರ್ವಭೌಮ, ಜಾತ್ಯಾತೀತ, ಸಮಾಜವಾದಿ ಮತ್ತು ಪ್ರಜಾಸತ್ತಾತ್ಮಕ ಗಣರಾಜ್ಯವಾಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ಹರಿದು ಹಂಚಿಹೋಗಿದ್ದ ರಾಜ್ಯಗಳನ್ನು ಭಾಷಾವಾರು ಪ್ರಾಂತ್ಯ ಗಳಾಗಿ ಪುನರ್‌ವಿಂಗಡಿಸಿ ವಿವಿಧತೆಯಲ್ಲಿ, ಏಕತೆಯ ಭಾವನೆಯನ್ನು ಮೂಡಿಸಲಾಯಿತು. ಭಾರತದ ಸಂಸತ್ತಿನ ಮೊದಲ ಅಧಿವೇಶನವನ್ನು ಸಹ ಇದೇ ದಿನ ನಡೆಸಲಾಯಿತು. ಇದರ ಜೊತೆಗೆ ಭಾರತದ ಮೊದಲ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರಪ್ರಸಾದ್ ಅವರ ಪ್ರಮಾಣವಚನಕ್ಕೆ ಸಾಕ್ಷಿಯಾಯಿತು. ಅಂತೆಯೇ ಆಯಾ ರಾಜ್ಯದಲ್ಲಿ ಆಯಾ ಭಾಷೆಗಳಲ್ಲಿಯೇ ವ್ಯವಹಾರಗಳು ಸುಗಮವಾಗಿ ಕಾರ್ಯನಿರ್ವಹಿಸಲು ಇದರಿಂದ ತುಂಬಾ ಸಹಕಾರಿಯಾಯಿತು.

ಸಂವಿಧಾನವೆಂಬುದು ಭಾರತದ ಜನರನ್ನು ಸಶಕ್ತಗೊಳಿಸಿದ ಸರ್ವೋಚ್ಚ ಕಾನೂನಾಗಿದೆ. ಭಾರತದ ಪ್ರಜೆಗಳನ್ನು ಆಳುವ ಶಾಸಕಾಂಗ, ನ್ಯಾಯ ಒದಗಿಸುವ ನ್ಯಾಯಾಂಗ ಹಾಗೂ ಜನರಿಗಾಗಿ ಕೆಲಸ ಮಾಡುವ ಕಾರ್ಯಾಂಗಗಳು ಹೇಗಿರಬೇಕು? ಯಾವೆಲ್ಲ ನೀತಿ ನಿಯಮಗಳನ್ನು ಕಟ್ಟಳೆಗಳನ್ನು ಪಾಲಿಸಬೇಕು ಎಂಬೆಲ್ಲಾ ಸೂಚನೆಗಳನ್ನು ಹಾಕಿಕೊಟ್ಟ ಸಮಗ್ರ ಮಾಹಿತಿಗಳ ಗುಚ್ಚವೇ ಸಂವಿಧಾನ. ಡಾ. ಬಿ.ಆರ್. ಅಂಬೇಡ್ಕರ ಅವರ ನೇತೃತ್ವದಲ್ಲಿ ರಚಿಸಲ್ಪಟ್ಟ ಭಾರತದ ಸಂವಿಧಾನವೇ ಬಹುದೊಡ್ಡದು. ಅಂದರೆ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ, ಏಕತೆ, ಭ್ರಾತೃತ್ವ ಇವು ನಮ್ಮ ಸಂವಿಧಾನದಲ್ಲಿರುವ ಐದು ಪ್ರಮುಖ ಮೌಲ್ಯಗಳಾಗಿವೆ.

ಇಂದು ಸಂವಿಧಾನದಂತೆ ದೇಶದ ಪ್ರತಿಯೊಬ್ಬ ಪ್ರಜೆಗೂ ಸಹ ಸಮಾನ ಶಿಕ್ಷಣ ಮತ್ತು ಮೂಲಭೂತವಾದ ಹಕ್ಕುಗಳು ದೊರೆತ ದಿನವಾಗಿದೆ.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper

ಸ್ವತಂತ್ರವಾದ ಮತ್ತು ಪ್ರಜಾಪ್ರಭುತ್ವ ವನ್ನು ಸ್ವೀಕರಿಸಿದ ದಿನವೆಂದು ಸಹ ಗುರುತಿಸಲಾಗಿದ್ದು, ಭಾರತದ ಉನ್ನತಿಗಾಗಿ ಬಲಿದಾನಗೈದು ತಮ್ಮ ಜೀವನವನ್ನೇ ಮುಡಿಪಾಗಿಟ್ಟ, ವೀರಸೈನಿಕರನ್ನು ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಮಹಾನ್ ವ್ಯಕ್ತಿಗಳನ್ನು ಇಂದು ಸ್ಮರಿಸಲಾಗುತ್ತದೆ.

ಈ ದಿನದಂದು ರಾಷ್ಟ್ರಪತಿಯವರು ರಾಷ್ಟ್ರದ ರಾಜಧಾನಿ ನವದೆಹಲಿಯ ಐತಿಹಾಸಿಕ ಕರ್ತವ್ಯಪಥದಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸುತ್ತಾರೆ. ರಾಷ್ಟ್ರಗೀತೆ ಹಾಡಲಾಗುತ್ತದೆ. ನಂತರ ರಾಷ್ಟ್ರಪತಿಯವರು ಭಾರತದ ಜನರನ್ನು ಉದ್ದೇಶಿಸಿ ಮಾತನಾಡುತ್ತಾ, ಆಯಾ ಕ್ಷೇತ್ರಗಳ ಅಭಿವೃದ್ಧಿಗಳಿಗೆ ಸಂಬಂಧಿಸಿದ ಹೊಸ ವಿಚಾರಗಳನ್ನು ಜನತೆಗೆ ಸಂದೇಶಗಳ ಮುಖಾಂತರ ನೀಡುತ್ತಾರೆ. ಈ ದಿನದಂದು ಭಾರತವು ಇತರೇ ದೇಶಗಳ ಗೌರವಾನ್ವಿತ ನಾಯಕರನ್ನು ಅಥವಾ ಮುಖ್ಯಸ್ಥರನ್ನು ಮುಖ್ಯಅತಿಥಿಯಾಗಿ ಆಹ್ವಾನಿಸುತ್ತದೆ. ಈ ಸುದಿನದಂದು ಸ್ವಾತಂತ್ರ್ಯ ಹೋರಾಟಗಾರರು ಮಾಡಿದ ತ್ಯಾಗವನ್ನು ಸ್ಮರಿಸಲು ನಾಗರೀಕರೆಲ್ಲರು ಒಟ್ಟಾಗಿ ಸೇರುತ್ತಾರೆ. ಈ ಸಂದರ್ಭದಲ್ಲಿ ನಮ್ಮ ದೇಶದ ಪ್ರತಿಯೊಂದು ಮಿಲಿಟರಿ ಸಶಸ್ತ್ರ ಪಡೆಗಳ ಪ್ರಭಾತ್‌ಭೇರಿ ಕರ್ತವ್ಯಪತ್‌ದಲ್ಲಿ ಭವ್ಯವಾದ ಮೆರವಣಿಗೆಯ ಮೂಲಕ ನಡೆಯುತ್ತವೆ.


ಹಾಗೆಯೇ ನಮ್ಮ ದೇಶದ ಎಲ್ಲಾ ರಾಜ್ಯಗಳ ಪ್ರಮುಖ ವಸ್ತು ವಿಷಯಗಳನ್ನೊಳಗೊಂಡ ಶ್ರೀಮಂತ ಹಾಗು ಸಾಂಸ್ಕೃತಿಕ ಪರಂಪರೆಯ ವೈವಿಧ್ಯಮಯವಾದ ಸ್ತಬ್ಧಚಿತ್ರಗಳು, ಬೃಹತ್ ಮೆರವಣಿಗೆಯ ಮೂಲಕ ಪ್ರದರ್ಶನಗೊಳ್ಳುತ್ತವೆ. ಇದು ವಿವಿಧತೆಯಲ್ಲಿ ಏಕತೆಯನ್ನು ಪ್ರತಿನಿಧಿಸುವ ಮತ್ತು ಮಹತ್ವವನ್ನು ಸಾರುವ ನಿಟ್ಟಿನಲ್ಲಿ ಆಯೋಜನೆಗೊಳಿಸ ಲಾಗಿರುತ್ತದೆ. ಈ ಮೂಲಕ ಭಾರತದ ರಕ್ಷಣಾ ಸಾಮರ್ಥ್ಯ, ಸಾಂಸ್ಕೃತಿಕ ಮತ್ತು ಸಾಮಾಜಿಕ ಪರಂಪರೆಯನ್ನು ಪ್ರಪಂಚಕ್ಕೆ ತಿಳಿಸಿಕೊಡಲಾಗುತ್ತದೆ. ಈದಿನ ಗಣರಾಜ್ಯೋತ್ಸ ವದ ಪ್ರಯುಕ್ತ ಶಾಲಾಕಾಲೇಜು ವಿಶ್ವವಿದ್ಯಾಲಯಗಳಲ್ಲಿ,



ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಎಲ್ಲಾ ಸರ್ಕಾರಿ–ಖಾಸಗಿ ಕಛೇರಿಗಳಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಲಾಗುತ್ತದೆ. ಇದಲ್ಲದೆ ವಿದ್ಯಾರ್ಥಿಗಳಿಂದ ನಗರಗಳಲ್ಲಿ ಮಾರ್ಚಫಾಸ್ಟ್ ನಡೆಸಲಾಗುತ್ತದೆ. ಹಾಗೆಯೇ ಇದರ ಮಹತ್ವವನ್ನು ವಿದ್ಯಾರ್ಥಿಗಳಿಗೆ ಪ್ರಬಂಧ, ಭಾಷಣ, ದೇಶಭಕ್ತಿಗೀತೆ ಹಾಗೂ ಸಾಂಸ್ಕೃತಿಕ ನೃತ್ಯಗಳ ಮೂಲಕ ತಿಳಿಯಪಡಿಸುವ ವರ್ಣರಂಜಿತವಾದ ಸಮಾರಂಭಗಳು ನಡೆಯುತ್ತವೆ. ಈದಿನವನ್ನು ನಾವು ನಮ್ಮ ಸ್ವಾಭಿಮಾನ ಮತ್ತು ಸಂಭ್ರಮದ ದಿನವೆಂದು ಹೆಮ್ಮೆಯಿಂದ ಹೇಳಬಹುದು.

ಗಣರಾಜ್ಯೋತ್ಸವದ ಮುನ್ನಾದಿನದಂದು, ಭಾರತದ ರಾಷ್ಟ್ರಪತಿಗಳು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಪದ್ಮಪ್ರಶಸ್ತಿಗಳನ್ನು ವಿತರಿಸುತ್ತಾರೆ. ಹಾಗೆಯೇ ವೀರಸೈನಿಕರಿಗೆ ಪರಮವೀರಚಕ್ರ, ಮಹಾವೀರಚಕ್ರ, ಅಶೋಕ ಚಕ್ರದಂತಹ ಇತ್ಯಾದಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತದೆ. ಈ ಪ್ರಶಸ್ತಿಗಳನ್ನು 1954ರಿಂದ ನಿರಂತರವಾಗಿ ನೀಡಲಾಗುತ್ತಿದೆ.

ಒಟ್ಟಾರೆ ಗಣರಾಜ್ಯೋತ್ಸವವು ಭಾರತದ ಮೂರು ರಾಷ್ಟ್ರೀಯ ಹಬ್ಬಗಳಲ್ಲಿ ಒಂದಾಗಿದೆ. ಧರ್ಮ, ಜಾತಿ, ಲಿಂಗ, ಮೇಲುಕೀಳು ಇತ್ಯಾದಿ ಭೇದಭಾವಗಳನ್ನು ಮರೆಸುವ ದಿನವಾಗಿದೆ. ಎಲ್ಲರೂ ಸಂತೋಷ, ಸಡಗರ, ಸಂಭ್ರಮದಿಂದ, ಗೌರವ ಉತ್ಸಾಹದಿಂದ ಆಚರಿಸುವ ಮತ್ತು ಎಲ್ಲರನ್ನೂ ಒಟ್ಟುಗೂಡಿಸುವ ಮಹಾಹಬ್ಬವಾಗಿದೆ.



### ತುಂಗಭದ್ರಾ ನೀರಿನ ಮಟ್ಟ

ಶನಿವಾರ : 25–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1619.19 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 11208 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 59.083 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1588.68 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 539 ಕ್ಯುಸೆಕ್ |
| ಸಾಮರ್ಥ್ಯ | 9.965 ಟಿಎಂಸಿ |

### ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

26–01–2025 – ಭಾನುವಾರ

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಜ್ಯೇಷ್ಠ |
| ಯೋಗ | : ವ್ಯಾಘಾತ |
| ಕರಣ | : ಕೌಳವ |
| ಸೂರ್ಯೋದಯ | : 07:10:06 |
| ಸೂರ್ಯಾಸ್ತ | : 18:09:10 |
| ರಾಹು ಕಾಲ | : 16:47–18:09 |
| ಯಮಘಂಡ ಕಾಲ | : 12:40–14:02 |
| ಗುಳಿಕ ಕಾಲ | : 15:24–16:47 |

ಹಂಪಿ ಟೈಮ್ಸ್
ಸುದ್ದಿ–ಜಾಹೀರಾತಿಗಾಗಿ
ಸಂಪರ್ಕಿಸಿ: 9448633038
ಕಚೇರಿ ವಿಳಾಸ: ವಾಲ್ಮೀಕಿ ಸರ್ಕಲ್ ಹತ್ತಿರ, ಬಂಬೂ ಬಜಾರ್, ಹೊಸಪೇಟೆ–583201 ವಿಜಯನಗರ ಜಿಲ್ಲೆ

## ದೇಶದ ಪ್ರಗತಿಗೆ ಮತದಾನ ಅಗತ್ಯ ನ್ಯಾಯಾಧೀಶೆ ಕೆ.ಜಿ.ಶಾಂತಿ ಹೇಳಿಕೆ



■ ಹಂಪಿ ಟೈಮ್ಸ್ ಬಳ್ಳಾರಿ

ದೇಶದ ಪ್ರಗತಿಯಾಗಬೇಕಾದರೆ, ಉತ್ತಮ ನಾಯಕನ ಆಯ್ಕೆ ಅಗತ್ಯ. ಹಾಗಾಗಿ ಪ್ರತಿಯೊಬ್ಬರೂ ಯಾವುದೇ ಆಮೀಷಕ್ಕೆ ಒಳಗಾಗದೇ ವಿವೇಚನೆಯಿಂದ ತಪ್ಪದೇ ಮತದಾನ ಮಾಡಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ಹೇಳಿದರು.

ಭಾರತ ಚುನಾವಣಾ ಆಯೋಗ, ಬಳ್ಳಾರಿ ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ 'ರಾಷ್ಟ್ರೀಯ ಮತದಾರರ ದಿನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಎಲ್ಲಾ ದಾನಕ್ಕಿಂತ ಶ್ರೇಷ್ಠದಾನ ಮತದಾನವೂ ಒಂದು. 18 ವರ್ಷ ತುಂಬಿದ ಯುವಕ–ಯುವತಿಯರು ಮತದಾನರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಶೇಕಡವಾರು ಮತದಾನದ ಪ್ರಮಾಣ ಹೆಚ್ಚಿಸಲು ತಪ್ಪದೇ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಅವರು ಹೇಳಿದರು.

ಹಿಂದಿನ ಕಾಲದ ಮತಪತ್ರ (ಬ್ಯಾಲೆಟ್ ಪೇಪರ್)ದ ಚುನಾವಣೆಗಳಲ್ಲಿ ಹಿರಿಯರೆಲ್ಲರೂ ಹಬ್ಬದಂತೆ ಮತದಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮತದಾನ ಪ್ರಮಾಣ ಹೆಚ್ಚಳಕ್ಕೆ ಪೂರಕವಾಗಿರುತ್ತಿದ್ದರು. ಆದರೆ ಈಗ ಬಟನ್ ಒತ್ತುವ ಮಾದರಿ ಬಂದರೂ ಸಹ ಈಗಿನ ಸಂದರ್ಭದಲ್ಲಿ ವಿದ್ಯಾವಂತರೂ ಸೇರಿದಂತೆ ಸೋಮಾರಿತನದಿಂದ ಮತದಾನದಿಂದ ಹೊರಗುಳಿಯುತ್ತಿದ್ದಾರೆ ಎಂದರು.

ಜಿಲ್ಲಾ ಚುನಾವಣಾಧಿಕಾರಿಗಳಾದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, 18 ವರ್ಷ ತುಂಬಿದ ಪ್ರತಿಯೊಬ್ಬರೂ ತಮ್ಮ ಮತದಾನ ಹಕ್ಕು ಚಲಾಯಿಸಬೇಕು. ವಿದ್ಯಾವಂತರು ತಮ್ಮ ಗೆಳೆಯರಿಗೆ, ಮನೆಗಳಲ್ಲಿ ಮತ್ತು ತಮ್ಮ ಅಕ್ಕ–ಪಕ್ಕದವರಿಗೆ ತಪ್ಪದೇ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರೂ ಆಗಿರುವ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಮಾತನಾಡಿ, ಸಂವಿಧಾನ ರಚನೆ ಸಂದರ್ಭದಲ್ಲಿ ಮತದಾನ ಹಕ್ಕು ಅಳವಡಿಸುವ ಕುರಿತು ಸಾಕಷ್ಟು ಚರ್ಚೆಯಾದವು. ಬಳಿಕ ಪ್ರತಿಯೊಬ್ಬರಿಗೂ ಮತದಾನ ಕೊಡಲೇಬೇಕು ಎಂದು ತೀರ್ಮಾನಿಸಲಾಯಿತು ಎಂದು ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ 'ಮತದಾರರ ಪ್ರತಿಜ್ಞಾ ವಿಧಿ' ಭೋದಿಸಿದರು. ಕಾರ್ಯಕ್ರಮದಲ್ಲಿ ಸಾರ್ವತ್ರಿಕ ಲೋಕಸಭೆ ಚುನಾವಣೆ–2024 ರ ಸ್ವೀಪ್ ಕಾರ್ಯಕ್ರಮದ ಚಟುವಟಿಕೆಗಳ ಕುರಿತು 'ಬ್ಯೂಟಿಫುಲ್ ಬಳ್ಳಾರಿ' ಎಂಬ ಶೀರ್ಷಿಕೆಯಡಿ ಮುದ್ರಿಸಲಾದ 'ಕಾಫೀ ಟೇಬಲ್ ಬುಕ್' ಗಳನ್ನು ಗಣ್ಯರು ಅನಾವರಣಗೊಳಿಸಿದರು. ಬಳಿಕ ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾನ ಜಾಗೃತಿ ಕುರಿತು ಶಾಲಾ–ಕಾಲೇಜುಗಳಲ್ಲಿ ಏರ್ಪಡಿಸಿದ್ದ ಪ್ರಬಂಧ, ಭಿತ್ತಿಚಿತ್ರ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರ ವಿತರಿಸಲಾಯಿತು. 18 ವರ್ಷ ತುಂಬಿ ಹೊಸದಾಗಿ ನೋಂದಾಯಿಸಿಕೊಂಡ ಯುವ ಮತದಾರರಿಗೆ ಸಂಕೇತಿಕವಾಗಿ ಮತದಾರರ ಚೀಟಿ ವಿತರಿಸಲಾಯಿತು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI

ಈಗಿಂದಲೇ ಪುನರ್‌ಮನನ ಮಾಡಿ

ಪರೀಕ್ಷೆಗೆ ನಾವು ಸಿದ್ಧ 54 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ನಿತ್ಯ ಏಳಿಗೆಗೆ ನಿಜ ಶ್ರೀ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

### ಭೂಗೋಳಶಾಸ್ತ್ರ ಅಧ್ಯಾಯ:28 – ಭಾರತದ ಪ್ರಮುಖ ಕೈಗಾರಿಕೆಗಳು

**1. ಭಾರತದ 'ಸಿಲಿಕಾನ್ ಕಣಿವೆ' ಎಂದು ಕರೆಯಲಾಗುವ ನಗರ ಯಾವುದು?** ಉತ್ತರ: ಬೆಂಗಳೂರು

**2. ಭಾರತದ 'ಮ್ಯಾಂಚೆಸ್ಟರ್' ಅಥವಾ ಭಾರತದ 'ಕಾಟನೋಪೊಲಿಸ್' ಎಂದು ಕರೆಯಲಾಗುವ ನಗರ ಯಾವುದು?** ಉತ್ತರ: ಮುಂಬಯಿ

**3.ದೇಶದಲ್ಲಿ ಪ್ರಥಮ ಉಕ್ಕಿನ ಕೈಗಾರಿಕೆಯು 1870 ರಲ್ಲಿ ಸ್ಥಾಪನೆಯಾದ ಸ್ಥಳ ಯಾವುದು?** ಉತ್ತರ: ಪ.ಬಂಗಾಳದ ಕುಲ್ಟಿ

**4.ದೇಶದಲ್ಲಿ ಪ್ರಥಮ ಕಾಗದ ಕೈಗಾರಿಕೆಯು ಸ್ಥಾಪನೆಯಾದ ಸ್ಥಳ ಯಾವುದು?** ಉತ್ತರ: ಪ.ಬಂಗಾಳದ ಸೆರಾಂಪುರ

**4.ಬಾಕ್ಸೈಟ್ ಅದಿರನ್ನು ಪ್ರಮುಖ ಕಚ್ಚಾ ವಸ್ತುವನ್ನಾಗಿ ಬಳಸುವ ಕೈಗಾರಿಕೆಯಾವುದು?** ಉತ್ತರ: ಅಲ್ಯೂಮಿನಿಯಂ ಕೈಗಾರಿಕೆ.

**5. ಇಸ್ರೋ ಸಂಸ್ಥೆಯು ಅಸ್ತಿತ್ವಕ್ಕೆ ಬಂದ ವರ್ಷ ಯಾವಾಗ?**
ಉತ್ತರ: 1969

**6.. ಇಸ್ರೋ ಪ್ರಧಾನ ಕಛೇರಿ ಇರುವ ಸ್ಥಳ ಯಾವುದು?**
ಉತ್ತರ: ಬೆಂಗಳೂರು

**7.ಇಸ್ರೋದ ಪ್ರಥಮ ಅಧ್ಯಕ್ಷರಾಗಿದ್ದವರು ಯಾರು?**
ಉತ್ತರ: ಡಾ. ವಿಕ್ರಮ್ ಸಾರಾಭಾಯಿ

**8. ಸಾಫ್ಟವೇರ್ ಟೆಕ್ನಾಲಜಿ ಪಾರ್ಕಗಳನ್ನು ಏಕೆ ಸ್ಥಾಪಿಸಲಾಗಿದೆ?**
ಉತ್ತರ: ಮಾಹಿತಿ ತಂತ್ರಜ್ಞಾನದ ಉದ್ಯಮವನ್ನು ಪ್ರೋತ್ಸಾಹಿಸಲು ಹಾಗು ರಫ್ತನ್ನು ಹೆಚ್ಚಿಸಲು ಸಾಫ್ಟವೇರ್ ಟೆಕ್ನಾಲಜಿ ಪಾರ್ಕಗಳನ್ನು (STP) ಸ್ಥಾಪಿಸಲಾಗಿದೆ.

**9. ಬೆಂಗಳೂರನ್ನು ಭಾರತದ 'ಸಿಲಿಕಾನ್ ಕಣಿವೆ' ಎಂದು ಕರೆಯಲು ಕಾರಣವೇನು?**
ಉತ್ತರ: ಭಾರತದಲ್ಲಿ ಬೆಂಗಳೂರು ಮಾಹಿತಿ ತಂತ್ರಜ್ಞಾನದ ಮುಖ್ಯ ಕೇಂದ್ರವಾಗಿರುವದರಿಂದ ಭಾರತದ 'ಸಿಲಿಕಾನ್ ಕಣಿವೆ' ಎಂದು ಕರೆಯಲಾಗಿದೆ

**10.ಮುಂಬಯಿಯನ್ನು ಭಾರತದ 'ಮ್ಯಾಂಚೆಸ್ಟರ್' ಅಥವಾ ಭಾರತದ 'ಕಾಟನೋಪೊಲಿಸ್' ಎಂದು ಕರೆಯಲು ಕಾರಣವೇನು?**
ಉತ್ತರ: ಮುಂಬಯಿಯಲ್ಲಿ ಅತಿ ಹೆಚ್ಚು ಹತ್ತಿ ಬಟ್ಟೆ ಕೈಗಾರಿಕೆಗಳಿರುವದರಿಂದ ಮುಂಬಯಿಯನ್ನು ಭಾರತದ 'ಮ್ಯಾಂಚೆಸ್ಟರ್' ಅಥವಾ ಭಾರತದ 'ಕಾಟನೋಪೊಲಿಸ್' ಎಂದು ಕರೆಯಲಾಗಿದೆ.

**11. ಭಾರತದ ಪ್ರಮುಖ ಕೈಗಾರಿಕಾ ವಲಯಗಳ ಪಟ್ಟಿ ತಯಾರಿಸಿ. (ಜೂನ್ 2024)**
ಉತ್ತರ: ಕೈಗಾರಿಕೆಗಳು ಹೆಚ್ಚು ಕೇಂದ್ರೀಕೃತವಾಗಿರುವ ಪ್ರದೇಶಗಳನ್ನು ಕೈಗಾರಿಕಾ ವಲಯ ಎನ್ನುತ್ತಾರೆ.
1. ನ್ಯಾಷನಲ್ ಕ್ಯಾಪಿಟಲ್ ಪ್ರದೇಶ 2. ಹೂಗ್ಲಿ ಪ್ರದೇಶ 3. ದಾಮೋದರ ಕಣಿವೆ ಪ್ರದೇಶ 4. ಅಹಮದಾಬಾದ್–ವಡೋದರ ಪ್ರದೇಶ 5. ಮುಂಬೈ–ಪೂನಾ ಪ್ರದೇಶ 6. ವಿಶಾಖಪಟ್ಟಣ–ಗುಂಟೂರು ಪ್ರದೇಶ 7. ಕೊಲ್ಲಂ–ತಿರುವನಂತಪುರ ಪ್ರದೇಶ. 8. ದಕ್ಷಿಣದ ಕೈಗಾರಿಕಾ ಪ್ರದೇಶ


**12. ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು? ಅಥವಾ ಕಬ್ಬಿಣಮತ್ತು ಉಕ್ಕಿನಕೈಗಾರಿಕೆ/ಕಾಗದ ಕೈಗಾರಿಕೆ/ಹತ್ತಿ ಕೈಗಾರಿಕೆ/ಸಕ್ಕರೆಕೈಗಾರಿಕೆ/ಅಲ್ಯೂಮಿನಿಯಂ ಕೈಗಾರಿಕೆ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು? (ಜೂನ್ 2020, ಸೆ2022)**
ಉತ್ತರ: ಕಚ್ಚಾ ವಸ್ತುಗಳ ಲಭ್ಯತೆ, ಶಕ್ತಿ ಸಂಪನ್ಮೂಲ ಲಭ್ಯತೆ,ಸಾರಿಗೆ ಮತ್ತು ಸಂಪರ್ಕ ಸೌಲಭ್ಯ ಕಾರ್ಮಿಕರ ಪೂರೈಕೆ ಭೂಮಿಯ ಲಭ್ಯತೆ. ತಾಂತ್ರಿಕತೆ ಬಂಡವಾಳ ಸೌಲಭ್ಯ ಮಾರುಕಟ್ಟೆ ಸೌಲಭ್ಯ, ಬಂದರು ಸೌಲಭ್ಯ ಬಂದರುಗಳ ಸೌಲಭ್ಯ ಸರ್ಕಾರದ ನೀತಿಗಳು

**13. ಉನ್ನತ ಅಥವಾ ಸುಧಾರಿತ ತಂತ್ರಜ್ಞಾನದ ಬಳಕೆಯಿಂದ ಆದ ಬದಲಾವಣೆಗಳೇನು?**
ಉತ್ತರ: ಟೆಲಿಫೋನಗಳ ಬಳಕೆ * ಉಪಗ್ರಹ ಉಡಾವಣೆ,
* ಅಂತರ್ಜಾಲ ಸಂಪರ್ಕ * ಚಂದ್ರನ ಮೇಲೆ ಪಾದಾರ್ಪಣೆ,
* ಯುದ್ಧ ಸಾಮಗ್ರಿ ತಯಾರಿಕೆ, ಪರಮಾಣು ಬಾಂಬ್ ತಯಾರಿಕೆ,
* ಸರಕಾರಿ ಕಚೇರಿಗಳಲ್ಲಿ ಪಾರದರ್ಶಕ ಇ–ಆಡಳಿತ. * ಕೃತಕ ಬುದ್ಧಿಮತ್ತೆಗಳಲ್ಲಿ ಸುಧಾರಿತ ತಂತ್ರಜ್ಞಾನದ ಬಳಕೆಯಾಗುತ್ತಿದೆ.

**14. ಇಸ್ರೋದ ಪ್ರಮುಖ ಸಾಧನೆಗಳು ಯಾವುವು?**
ಉತ್ತರ: 1.ಭಾರತೀಯ ರಾಷ್ಟ್ರೀಯ ಉಪಗ್ರಹ ವ್ಯವಸ್ಥೆಯ ಅಭಿವೃದ್ಧಿ. 2. ಮೊದಲ ಪ್ರಯತ್ನದಲ್ಲೇ ಮಂಗಳ ಗ್ರಹವನ್ನು ತಲುಪಿದ ಮೊದಲ ರಾಷ್ಟ್ರ ಭಾರತ. 3. ಚಂದ್ರನ ದಕ್ಷಿಣ ಧ್ರುವದ ಬಳಿ ಇಳಿದ ಮೊದಲ ದೇಶ ಭಾರತ.

**15. ಜ್ಞಾನಾಧಾರಿತ ಕೈಗಾರಿಕೆಗಳು ಎಂದರೇನು? ಉದಾಹರಣೆ ಬರೆಯಿರಿ.**
ಉತ್ತರ: ಮಾನವನ ಜ್ಞಾನವೇ ಆಧಾರವಾಗಿರುವ ಕೈಗಾರಿಕೆಗಳನ್ನು ಜ್ಞಾನಾಧಾರಿತ ಕೈಗಾರಿಕೆಗಳು ಎನ್ನುವರು.
ಉದಾಹರಣೆ: 1. ಮಾಹಿತಿ ತಂತ್ರಜ್ಞಾನ 2. ಜೈವಿಕ ತಂತ್ರಜ್ಞಾನ 3. ಉನ್ನತ ತಂತ್ರಜ್ಞಾನ

ಭಾರತದ ಕೈಗಾರಿಕಾ ಸ್ಥಳಗಳು




www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಕೊಟ್ರೇಶ್ ಮಾಳಿಗಿ ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ) ಮೊ:9916567120

ಸಾಯಿಮಣಿ ಪ್ರಕಾಶನ, ಹೊಸಪೇಟೆ

# ಮತದಾನದ ಅವಕಾಶ ಕಳೆದುಕೊಳ್ಳಬೇಡಿ ಯುವಮತದಾರರೆ ಭವ್ಯಭಾರತದ ಪ್ರಜೆಗಳು

## ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಪೋಕ್ಸೋ ನ್ಯಾಯಾಲಯದ ನ್ಯಾಯಾಧೀಶರಾದ ಕುಮಾರ್ ಡಿ.ಕೆ ಹೇಳಿಕೆ ವಿಶ್ವದಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ನಮ್ಮದಾಗಿದೆ ಎಂದ ಕೊಪ್ಪಳ ಡಿಸಿ ನಲಿನ್ ಅತುಲ್ । ರಾಷ್ಟ್ರೀಯ ಮತದಾರರ ದಿನಾಚರಣೆ

■ ಹಂಪಿ ಟೈಮ್ಸ್ ಕೊಪ್ಪಳ

ಯುವ ಮತದಾರರು ಭವ್ಯ ಭಾರತದ ಪ್ರಜೆಗಳಾಗಿದ್ದು ಚುನಾವಣೆಗಳ ಸಂದರ್ಭದಲ್ಲಿ ತಾವೆಲ್ಲರೂ ತಪ್ಪದೇ ಮತ ಚಲಾಯಿಸಬೇಕೆಂದು ಗೌರವಾನ್ವಿತ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಪೋಕ್ಸೋ ನ್ಯಾಯಾಲಯದ ನ್ಯಾಯಾಧೀಶರಾದ ಕುಮಾರ್ ಡಿ.ಕೆ ಹೇಳಿದರು.

ಅವರು ಶನಿವಾರ ಭಾರತ ಚುನಾವಣಾ ಆಯೋಗ, ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ. ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ ಕೊಪ್ಪಳ. ಹಾಗೂ ಜಿಲ್ಲಾ ಸ್ವೀಫ್ ಸಮಿತಿ ಕೊಪ್ಪಳ ಇವರ ಸಹಯೋಗದಲ್ಲಿ ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆ –2025 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರಜಾಪ್ರಭುತ್ವದಲ್ಲಿ ಪ್ರತಿ ಪ್ರಜೆ–ಪ್ರತಿನಿಧಿ, ತಮ್ಮ ನಾಯಕನನ್ನು ಆಯ್ಕೆ ಮಾಡುವ ಶಕ್ತಿ ತಮ್ಮ ಮತಕ್ಕಿದೆ. ಮತದಾರರಲ್ಲಿ ಜಾಗೃತಿ ಮೂಡಿಸುವ ಮೂಲಕ ಎಲ್ಲರೂ ಮತದಾನ ಮಾಡಬೇಕು ಎಂಬುದು ಭಾರತ ಚುನಾವಣಾ ಆಯೋಗದ ಧ್ಯೇಯೋದ್ದೇಶವಾಗಿದೆ. ಇಂದಿನ ವೈಜ್ಞಾನಿಕ ವಿಧ್ಯಮಾನಗಳಿಂದ ನಿಮ್ಮ ಕೈಯಲ್ಲಿ ಎಲ್ಲಾ ಮಾಹಿತಿ ಇದೆ. ಮೊಬೈಲ್ ಮೂಲಕ ಮಾಹಿತಿಯನ್ನು ಕುಳಿತಲ್ಲೆ ಪಡೆಯಬಹುದಾಗಿದೆ. ತಮಗೆಲ್ಲರಿಗೂ ರಾಷ್ಟ್ರೀಯ ಮತದಾರರ ದಿನಾಚರಣೆ ಶುಭಾಶಯಗಳು ಎಂದು ಹೇಳಿದರು.

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ನಲಿನ್ ಅತುಲ್ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ವಿಶ್ವದಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ನಮ್ಮದಾಗಿದೆ. ಇದನ್ನು ಮುಂದುವರಿಸಿಕೊಂಡು ಹೋಗ ಬೇಕಾದರೆ ಈ ದೇಶದ ಪ್ರಜೆಗಳ ಪಾತ್ರ ಬಹಳ ಮುಖ್ಯ ಇದೆ. ನಮ್ಮ ದೇಶದ ಪ್ರಗತಿ ನಮ್ಮ ನಾಯಕರು ನಿರ್ಧರಿಸಿದರೆ, ಅವರಿಗೆ ನಮ್ಮ ಮತ ನಿರ್ಧರಿಸುತ್ತದೆ



ಹಾಗಾಗಿ ಎಲ್ಲರೂ ತಪ್ಪದೇ ಮತದಾನ ಮಾಡಬೇಕು ಎಂದರು.

ಜನರಿಗೆ ತಮ್ಮ ಮತದಾನದ ಮಹತ್ವ ತಿಳಿಸಲು ಪ್ರತಿವರ್ಷ ಜನವರಿ 25 ರಂದು ರಾಷ್ಟ್ರೀಯ ಮತದಾರರ ದಿನಾಚರಣೆ ಆಚರಿಸಲಾಗುತ್ತದೆ. ಸ್ವೀಫ್ ಸಮಿತಿ ಮೂಲಕವು ಹಲವಾರು ಮತದಾನ ಜಾಗೃತಿ ಕಾರ್ಯಕ್ರಮಗಳನ್ನು ಚುನಾವಣೆ ಸಂದರ್ಭಗಳಲ್ಲಿ ಹಮ್ಮಿಕೊಳ್ಳಲಾಗುತ್ತದೆ. ಇದರ ಉದ್ದೇಶ ಉತ್ತಮ ನಾಯಕನ ಆಯ್ಕೆ ಜನರು ಮಾಡಬೇಕು ಎಂಬುದಾಗಿದೆ. ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಎಲ್ಲರೂ ನೊಂದಣಿ ಮಾಡಿಕೊಳ್ಳಬೇಕು ಎಂದರು.

ನಮ್ಮ ಜಿಲ್ಲೆಯಲ್ಲಿ ಪುರುಷರಿಗಿಂತ ಮಹಿಳೆಯರೆ ಮತದಾರರ ಪಟ್ಟಿಯಲ್ಲಿ ಹೆಚ್ಚಿನ ನೊಂದಣಿ ಮಾಡಿಕೊಂಡಿದ್ದಾರೆ. 18 ವರ್ಷ ಮೇಲ್ಪಟ್ಟ ಯುವ ಮತದಾರರೆಲ್ಲರೂ ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಜಿಲ್ಲೆಯಲ್ಲಿ 17 ಸಾವಿರ ಜನ ದಿವ್ಯಾಂಗರು ಇದ್ದಾರೆ. ಇನ್ನೂ ಹೆಚ್ಚಿನ ಜನ ಇರಬಹುದು. ಹಿಂದಿನ ವರ್ಷದ ಲೋಕಸಭಾ ಚುನಾವಣೆಯಲ್ಲಿ 100 ವರ್ಷ ಮೇಲ್ಪಟ್ಟ 227 ಜನ ಮತದಾನ ಮಾಡಿದ್ದಾರೆ. ಈ ವರ್ಷದ ಚುನಾವಣಾ ಆಯೋಗದ ಧ್ಯೇಯವಾಕ್ಯ ಮತದಾನಕ್ಕಿಂತ ಇನ್ನೊಂದಿಲ್ಲ ನಾನು ಖಚಿತವಾಗಿ ಮತದಾನ ಮಾಡುವೆ ಎಂಬುದಾಗಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾ ಸ್ವೀಫ್ ಸಮಿತಿ ಅಧ್ಯಕ್ಷರಾದ ರಾಹುಲ್ ರತ್ನಂ ಪಾಂಡೇಯ ಅವರು ಮತದಾರರ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಯುವ ಮತದಾರರಿಗೆ ಸಾಂಕೇತಿಕವಾಗಿ ಮತದಾರರ ಗುರುತಿನ ಚೀಟಿಗಳನ್ನು ವಿತರಿಸಲಾಯಿತು. ಭೂತ ಮಟ್ಟದಲ್ಲಿ ಉತ್ತಮ ಕಾರ್ಯನಿರ್ವಹಿಸಿದ ಬಿ.ಎಲ್.ಓ ಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮತದಾರರ ದಿನಾಚರಣೆ ಅಂಗವಾಗಿ ವಿವಿಧ ಶಾಲಾ–ಕಾಲೇಜುಗಳಲ್ಲಿ ಹಮ್ಮಿಕೊಂಡಿದ್ದ ರಸಪ್ರಶ್ನೆ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪತ್ರಗಳನ್ನು ನೀಡಿ ಸನ್ಮಾನಿಸಲಾಯಿತು. ಅತ್ಯುತ್ತಮ ಎಲೆಕ್ಟ್ರೋ ಲಿಟರಸಿ ಕಾಲೇಜಿನ ಮುಖ್ಯಸ್ಥರಿಗೆ ಇದೇ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮ್ ಎಲ್ ಅರಸಿದ್ದಿ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ್ ಎಸ್ ದರಗದ, ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ಚುನಾವಣಾಧಿಕಾರಿ ಸಿದ್ರಾಮೇಶ್ವರ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರೇಷ್ಮಾ ಹಾನಗಲ್, ಉಪ ವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಜಿ.ಪಂ ಯೋಜನಾ ನಿರ್ದೇಶಕ ಪ್ರಕಾಶ ವಿ. ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಗದೀಶ್, ಶಾಲಾ– ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಶ್ರೀಶೈಲ ಬಿರಾದಾರ, ಕೊಪ್ಪಳ ತಹಶೀಲ್ದಾರ ವಿಠಲ ಚೌಗಲಾ, ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎ.ಬಸವರಾಜ, ರಾಜ್ಯಮಟ್ಟದ ಚುನಾವಣಾ ಸಂಪನ್ಮೂಲ ವ್ಯಕ್ತಿಗಳು ಹಾಗೂ ವಿವಿಧ ಶಾಲಾ–ಕಾಲೇಜುಗಳ ಮುಖ್ಯ ಗುರುಗಳು, ಶಿಕ್ಷಕರು ಮತ್ತು ಮಕ್ಕಳು ಸೇರಿದಂತೆ ಇತರೆ ಹಲವಾರು ಜನರು ಉಪಸ್ಥಿತರಿದ್ದರು.

ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಬೆಳಿಗ್ಗೆ ಕೊಪ್ಪಳ ತಾಲ್ಲೂಕು ಕ್ರೀಡಾಂಗಣದಲ್ಲಿ ವಿವಿಧ ಶಾಲಾ– ಕಾಲೇಜಿನ 3 ಸಾವಿರಕ್ಕಿಂತ ಹೆಚ್ಚಿನ ಮಕ್ಕಳು ಸೇರಿ ಬೃಹತ್ ಮಾನವ ಸರಪಳಿ ನಿರ್ಮಿಸಿ ಅದರಲ್ಲಿ ಭಾರತ ನಕ್ಷೆ, ವಾಯ್ಸ್ ಆಫ್ ಡೆಮಾಕ್ರಸಿ, ಸ್ವೀಫ್ ಕೊಪ್ಪಳ ನಿರ್ಮಿಸಿ ಗಮನ ಸೆಳೆದರು.



**ಕವಿ ಮನಸು**

### ಹಲವು ಬಳ್ಳಿಯ ಹೂಗಳು

ಸುಭಾಸ ಭಗತ ತಿಲಕರಿಂದ
ಪಟೇಲ ಭೀಮ ಪ್ರಸಾದರಾದಿ
ಗಾಂಧಿ ಶಾಸ್ತ್ರೀ ನಡೆದು ಬಂದ
ದಾರಿ ಕಂಡಿತೋ....
ನಮಗೆ ಹಾದಿ ತೋರಿತೋ....

ಕಾಶ್ಮೀರದ ಕಣಿವೆಯಲ್ಲಿ
ಕನ್ಯಾಕುಮಾರಿ ಮಡಿಲಿನಲ್ಲಿ
ಸಹ್ಯಾದ್ರಿಯ ಒಡಲಿನಲ್ಲಿ
ನಾವು ಧನ್ಯರೋ...
ಇಲ್ಲಿ ನಾವು ಧನ್ಯರೋ...

ಮರಾಠಿಯ ಮೊಗ್ಗು ಬಿರಿದು
ಗುಜರಾತಿ ಘಮಲು ಹರಿದು
ಕನ್ನಡದ ಕಂಪು ಸುರಿದು
ತಂಪಾದಿತೋ....ನೆಲವು ಇಂಪಾದಿತೋ...

ರಾಮ ರಹೀಮ ಯೇಸು ಬುದ್ಧ
ಒಂದೇ ಎಂಬ ಭಾವ ಶುದ್ಧ
ಐಕ್ಯತೆಯ ದೀಪದಿಂದ
ಬೆಳಕಾದಿತೋ...ನಾಡು ಬೆಳಕಾಯಿತೋ...

ಬಳ್ಳಿ ಹಲವು ತೋಟವೊಂದೆ
ಹೂವು ಹಲವು ಘಮಲು ಒಂದೇ
ಏಕತೆಯ ಮಂತ್ರ ಎಂಬ
ಸಸಿಯು ಮೊಳೆಯಿತೋ....
ಇಲ್ಲಿ ಹಸಿರು ಬೆಳೆದಿತೋ..

ಕೋಟಿ ಜಾತಿ ಪ್ರೀತಿ ಒಂದೇ
ನೂರು ಮತವು ಶಪಥ ಒಂದೇ
ಭಾರತಾಂಬೆ ತಾಯಿ ಎಂಬ
ಘೋಷ ಮೊಳಗಿತೋ...
ಇಲ್ಲಿ ದೇಶ ಬೆಳಗಿತೋ..

– ಬೆಳಕು ಪ್ರಿಯ, ಹೊಸದುರ್ಗ

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

